Licence No. 60,
licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ತಾರೀಕು ೩೦–೧೧–೧೯೫೧ನೇ ಶುಕ್ರವಾರ | ಸಂಚಿಕೆ ೩೬

॥ ಮತದ ಮಹತ್ವ ಮತ್ತು ಮೀಮಾಂಸೆ. ॥

ಮತದಾರರು ರಾಜಕೀಯ ಪಕ್ಷ ವಿಪಕ್ಷಗಳ ಧ್ಯೇಯ ಧೋರಣೆಗಳನ್ನು ಸೇವಾಬಲ ಸಂಘಟನ ಶಕ್ತಿಗಳನ್ನು ತಿಳಿದುಕೊಳ್ಳುವುದಲ್ಲದೆ ತನ್ನ ಮತದ ಮಹತ್ವವನ್ನೂ ಪೂರ್ಣಾಕ್ಷರವಾಗಿ ಅರಿತುಕೊಳ್ಳಬೇಕು. ಅದರ ಅರ್ಥ, ಪ್ರಭಾವ, ಪರಿಣಾಮಗಳನ್ನೂ ಮನಗಂಡಿಟ್ಟು ಮಾಡಿಕೊಳ್ಳಬೇಕು. ಏಕೆಂದರೆ ಮತನೆಂಬುದು ಮಂಗನ ಕೈಯ ಮಾಣಿಕ್ಯವಾಗಬಾರದು. ಮತ್ತು ವಿನ ಸದುಪಯೋಗವೇ ಯೋಗವೆಂಬುದನ್ನು ಮರೆಯಲಾಗದು. ಅದುದರಿಂದ ನಮಗೆ ತಿಳಿದ ಮಟ್ಟಿಗೆ ಮತದ (Vote) ಗುಟ್ಟು ಗುರಿ, ಅಹಿತ, ಅಪಾಯ, ಗುಣ, ಗೌರವ ಮುಂತಾದ ಅಂಶಗಳ ಅಲೋಚನೆ ಮಾಡಿ ಅದರ ಅರ್ಥ ವಿವರಣೆಯನ್ನು ಇಲ್ಲಿ ಕೊಡಲಾಗಿದೆ.

ಈಗಿನ ಕಾಲದಲ್ಲಿ ಮತದಾನವು ಬಹುದಾನಗಳಲ್ಲೊಂದು ಎಂಬ ಮನ್ನಣೆ ಪಡೆಯುತ್ತಿದೆ. ಅದಕ್ಕೆ ಭೂದಾನ, ಕನ್ಯಾದಾನ, ಗೋದಾನ, ಸುವರ್ಣದಾನಗಳಿಗಿ ತಲೂ ಹೆಚ್ಚಿನ ಹಿರಿಮೆಯೊದಗುತ್ತಿದೆ. ಏಕೆಂದರೆ ಇತ್ತೀಚೆಗೆ ಮತಕ್ಕೆ ಬಾಯ್ತೆರೆದು ಹಂಬಲಿಸುವವರು ಹೇರಳವಾಗಿದ್ದಾರೆ. ಕಾಡಿ ಬೇಡಿ ಬೆಂಬತ್ತಿದಂತೆ ಅಡರ ಬೆಲೆ ಬೆಳೆಯುತ್ತಿದೆ. ಅದು ರಾಜಕೀಯ ಸಾಮಾಜಿಕ ಆರ್ಥಿಕ ಪಕ್ಷಪಂಗಡಗಳನ್ನು ಕಟ್ಟಬಲ್ಲದು, ಕುಟ್ಟಬಲ್ಲುದು. ರಾಜ್ಯಗಳನ್ನುರಿಸಬಲ್ಲುದು. ಅಡಳಿತವನ್ನು ಜುಡನೇರಲು ಮಾಡಬಲ್ಲದು. ಸ್ವತಂತ್ರ ಸೌಭಾಗ್ಯಗಳನ್ನೆ ತರಬಲ್ಲದು, ಗಂಡಾಂತರದ ಗಣಿಗೆ ನೂಕಬಲ್ಲದು. ಇಂತಹ ಪ್ರಭಾವವುಳ್ಳ ಮತವನ್ನು ಸಂತಯಿಸುವ, ಸಾಧಿಸುವ ತತ್ವ–ತಂತ್ರಗಳನ್ನು ಎಲ್ಲರೂ ಅಭ್ಯಸಿಸುತ್ತಿದ್ದರೆ ಅದೊಂದು ಆಶ್ಚರ್ಯವಲ್ಲ.

ಅದರ ವಿಶಾಲ ವ್ಯಾಪ್ತಿಯುಳ್ಳ ಅರ್ಥವನ್ನು ತಿಳಿಯಬಲ್ಲವರ ಕೈಯಲ್ಲಿರುವ ಮತವು ಸ್ವಾತಂತ್ರ್ಯದಕ್ಷತೆಯೊಗಿ, ಪ್ರಜಾ ಪ್ರಭುತ್ವದ ಪತಕೆಯೊಗಿ ಫಿಲ್ಲಬಲ್ಲುದು. ಅಂತಯಂ ಕೈಯ ಮತವು ಸರಕಾರದ ಸಾರಥಿಯೊಗುವುದು. ಗತ್ಯಂತರವಾಗಿಗೆ ಗಂಡಾಂತರವಾಗುವುದು. ಅಡಳಿತದ ಅಥವಾ ರಾಜ್ಯ ವ್ಯವಸ್ಥೆಯ ಸೂತ್ರಚಾಲಕವಾಗುವುದು. ಅಧಿಕ ಪ್ರಸಂಗಿಗಳ, ಅಧಿಕಾರ ವಂತಾಂಧರ ಅಂಕುಶವಾಗುವುದು. ಜಾತ್ಯತೀತ ಜ್ಯೋತಿಯೊಗುವುದು. ಶಾಂತಿ–ಸಮತೆಗಳ ಸಾಧನವಾಗುವುದು. ಜನಹಿತವ ರ್ಧಿಸಿಯೊಗುವುದು ಅಡಳಿತ ವರ್ಗಕ್ಕೆ ಅಂಜನವಾಗುವುದು. ಶಾಂತಿ ಪುಷ್ಟಿ. ತಪ್ಪಿಗಳನ್ನೀಯುವ ಕಾಮಧೇನುವಾಗುವುದು.

ಆದರೆ ಅರಿಯದವರ ವಶವಲ್ಲಿರುವ, ಮತ್ತು ಬೇರೆಯವರ ಬುದ್ಧಿಗೆ ಕಿವಿ ಜೋಲುವವರ ಕೈಯಲ್ಲಿರವವರ ಮತವು ಅನೇಕ ಸಲ ಅನರ್ಥಕಾರಿಯೊಗುವ ಸಂಭವವುಂಟು. ಅದುದರಿಂದ ಶಿಕ್ಷಣಾನುಭವಗಳಿಂದ ಸ್ವತಂತ್ರ ವಿಚಾರಶಕ್ತಿಯನ್ನು ಪಡೆಯದ ಪ್ರಜೆಗಳ ಸಂಖ್ಯೆಯಂ ಅತ್ಯಧಿಕವಾಗಿರುವಲ್ಲಿ ಪ್ರಜಾಪ್ರಭುತ್ವವು ಅದರ್ಶಕ್ಕೆ ಗೆಲವು ಗಟ್ಟಿ ನಡೆಯುವದು ತುಂಬ ಕಷ್ಟವೆಂದು ಬಲ್ಲವರು ಹೇಳುತ್ತಾರೆ. ಅರಿಯದ ಮುಗ್ಧ ಮತದಾರರು ಜಾತಿಗಳ ಜಾಲಕ್ಕೆ ಸೋಲಬಹುದು. ಕುಹಕರ ಕೈಗೊಂಬೆಯೊಗಬಹುದು. ಬೆರಕೆಗತ್ತಿನವರ ಬಲೆಗೆ ಬೀಳಬಹುದು. ಒಂದಲ್ಲ ಎಡಲ್ಲ ಹಲವು ಅನಾಹುತಗಳಿಗೆ ಆಹುತಿಯೊಗಬಹುದು.

ಇಂತಹ ಅನರ್ಥ ಪರಂಪರೆಯನ್ನು ತಡೆಯಲು ಜನಾನುರಾಗವುಳ್ಳ ಸುಶಿಕ್ಷಿತರು, ನಿರಕ್ಷರಿಗಳಿಗೆ ತಿಳಿಯದವರಿಗೆ ಮತದಲ್ಲಡಗಿರುವ ಮಹತ್ವವನ್ನು ಮನಮಟ್ಟಿಯಿಂದ ತಿಳಿಸಬೇಕು. ಚುನಾವಣೆಗಳೆಂದರೆ ರಾಜ್ಯಾಸ್ಥೆಯನ್ನು ಸಾಗಿಸಲು ಸಮರ್ಥವಾದ ಗುಣಶಾಲಿಗಳನ್ನು ಆರಿಸಿ ಕಳಿಸುವ ಹಿರಿದಾದ ಹೊಣೆಯೆಂಬುದನ್ನು ಅವರ ಗಮನಕ್ಕೆ ತಂದು ಕೊಡಬೇಕು. ಚುನಾವಣೆಯೆಂದರೆ ಅದೊಂದು ಹಬ್ಬ ಹಂದಾಗಳ ಸಂಭ್ರಮವಲ್ಲ ಜನತೆಯು ಸಾರಾ ಸಾರಾ ವಿಚಾರ ಮಾಡಿ ತಾನು ಇಷ್ಟಪಡುವ ಪ್ರತಿನಿಧಿಗಳನ್ನು ಸರಕಾರ ನಡೆಸಲು ಆರಿಸಿ ಕಳಿಸುವ ಮಹಾಕಾರ್ಯ. ಈ ಕೆಲಸವನ್ನು ಜನರು ಸೋಮಾತನದಿಂದ, ತಿಳಿಗೇಡಿತನದಿಂದ ಸರಿಯಾದ ರೀತಿಯಲ್ಲಿ ನೆರವೇರಿಸದಿದ್ದರೆ, ತಮಗಿಷ್ಟವಿಲ್ಲದವರು ಅಧಿಕಾರ ಪದಗಳಿಗೇರಿ ತುಂಬ ತೊಂದರೆಪಡಬೇಕಾದೀತೆಂಬುದನ್ನು ನೆನಪಿನಲ್ಲಿಡಬೇಕು. ಈ ಬಗೆಗೆ ಪ್ರಭಾವಶಾಲಿಯೂದ ಪ್ರಚಾರನಡೆಸುವ ಹೊಣೆಯು ಓದು ಬರಹ ಬಲ್ಲವರದು, ನಾಡಿನ ಸಮಸ್ಯೆಗಳನು ತಿಳಿದವರದು.

ಮುಂಬರುವ ಚುನಾವಣೆಗಳು ಜನಕಾ ಶಿಕ್ಷಣಕ್ಕೊಂದು ಸಂಧಿ. ಜನಸಾಮಾನ್ಯರಿಗೆ, ಹಳ್ಳಿಯವರಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಪ್ರಶ್ನೆಗಳನ್ನು ತಿಳಿಯುವ ಭಾಷೆಯಲ್ಲಿ ಮನವರಿಕೆಯಾಗುವಂತೆ ಬಿಡಿಸಿ ಹೇಳುವ ಅನುಕೂಲ ಕಾಲ. ರಾಷ್ಟ್ರಜೀವನದ ಪುನರುಜ್ಜೀವನವಾಗಿ ರಾಜ್ಯಾಂಗದಲ್ಲಿ ಸಾಮರ್ಥ್ಯ ನಿರ್ಮಾಣವಾಗಬೇಕಾದರೆ, ಜನರು ಅಡಳಿತವನ್ನು ಅರ್ಥ ಮಾಡುವ ಅನುಭವ ಪಡೆಯಬೇಕಾದರೆ, ಈ ಸಂದರ್ಭವನ್ನು ಲೋಕ ಶಿಕ್ಷಣಕ್ಕಾಗಿ ಪೂರ್ಣ ಉಪಯೋಗಿಸಬೇಕು. ಸರ್ವ ಶಿಕ್ಷಣ ಸಾಧನಗಳನ್ನೂ ಬಳಸಿ ಜನತೆಯಲ್ಲಿ ಮತದಾನದ ಮಹತ್ವ ನೇನೆಂಬುದನ್ನು ಬಿಂಬಿಸಬೇಕು. ಉಪನ್ಯಾಸ ಕೀರ್ತನ, ಪ್ರಬಂಧನ ಸಂಭಾಷಣಗಳಿಂದ ಇದನ್ನು ಸಾಧಿಸಬೇಕು. ಕಾರ್ಯಕರ್ತರು ಹಳ್ಳಿಗಳ ಹತ್ತು ನಡೆಯನ್ನು ಬೆಳೆಸಿಕೊಂಡು ವಯಸ್ಕರಿಗೆಲ್ಲ ಸಾಧ್ಯವಾಡಷ್ಟು ಹೆಚ್ಚಿನ ರಾಜಕೀಯ ಆರ್ಥಿಕ ಜ್ಞಾನವನ್ನು ಕೊಡಬೇಕು. ಶಾಸನ ಸಭೆಗಳೆಂದರೇನು, ಪಾರ್ಲಿಮೆಂಟು ಅಂದರೇನು ದೇಶದ ಅಡಳಿತದಲ್ಲಿ ಅವುಗಳ ಪಾತ್ರವೇನು ಎಂಬುದನ್ನೆಲ್ಲ ಜೆನ್ನಾಗಿ ವಿವರಿಸಬೇಕು. ಸ್ತ್ರೀಯರಿಗೂ ಈ ಬಗೆಯ ಶಿಕ್ಷಣ ಸಿಕ್ಕಬೇಕು. ಹೀಗೆ ವಿಶಾಲ ಚುನಾವಣಿಯ ಮೇಲೆ ಲೋಕ ಶಿಕ್ಷಣವು ಒಂದೆರಡು ತಿಂಗಳಾದರೂ ನಡೆದರೆ ಜನರಿಗೆ ತಮ್ಮ ಹಕ್ಕು ಹಿತ ಹೊಣೆಗಳ ಅರಿವಾಗುವುದು. ತನ್ನ ಕೈಯಲ್ಲಿರುವ ಮತವೆಂಬ ಅಮೂಲ್ಯ ಅಸ್ತ್ರದ ಅರ್ಥವಾಗುವುದು. ಮತವು ನಾಡಿನ ನೆಮ್ಮದಿಯ ನಿಧಿಯೆಂಬುದು ಆಗ ಹೊಳೆಯುವುದು. ಅದರ ದುರುಪಯೋಗದಿಂದ ದುರಂತವಾದೀತೆಂದು ಅನಿಸುವುದು. ಸಮಗ್ರ ರಾಷ್ಟ್ರದ ಸುದೃಢವಾದ ಐಕ್ಯ, ಸರ್ವಜಾತಿ ಮತ ಪರಧದವರೆಗೂ ಬೆಳವಣಿಗೆ ಸಮೃದ್ಧವಾದ ಕಾಶ, ಜೀವನಾವಶ್ಯಕ ವಸ್ತುಗಳ ಸಮೃದ್ಧಿ, ಶಿಕ್ಷಣಾಭಿವೃದ್ಧಿ ರಾಷ್ಟ್ರ ರಕ್ಷಣ ಶಕ್ತಿ ಮೊದಲಾದುವನ್ನು ಸಾಧಿಸಲು, ಶಾಸನ ಸಭೆಗೆ ಸರ್ವ ಹಿತದೃಷ್ಟಿಯ ಸಮರ್ಥರು ಹೋಗಬೇಕೆಂದು ಅವರಿಗೆ ತಾತ್ಪರ್ಯ ತಿಳಿಯುವುದು. ಸರಕಾರದ ರಚನೆಯ ಶಿಲ್ಪಿಗಳು ತಾವೇ, ತಮ್ಮ ಮತಗಳಲ್ಲಿಯೇ ಮಂತ್ರಿಗಳ ಮೂಲ ಎಂಬುದನ್ನು ಬಗೆದಂದು ಜಾಗರೂಕರಾಗುವರು. ರಾಜ್ಯಭಾರಿಗಳ ರಾಯಭವು ತಮ್ಮ ಕೈಯಲ್ಲಿದೆಯೆಂದು ಅನುಸಂತೋಷಪಡುವರು. ರಾಷ್ಟ್ರದ ಆಗು ಹೋಗುಗಳನ್ನು ತೂಗುವ ತೊಟ್ಟಿಲವು ತಮ್ಮ ಮತದಲ್ಲಿರುವುದರಿಂದಲೇ, ಚುನಾವಣೆಯಲ್ಲಿ ಇಷ್ಟೊಂದು ಚಟುವಟಿಕೆ ತುರುಸು ಏರಾಟ ಹೋರಾಟಗಳು ನಡೆಯುವುವೆಂಬುದನ್ನು ಸೊಗಸಾಗಿ ತಿಳಿಯುವರು. ದೇಶದ ಏಳುಬೀಳುಗಳು ತಮ್ಮ ಮತವನ್ನವಲಂಬಿಸಿವೆಯೆಂದ ಬಳಿಕ, ತಮ್ಮ ಕೇಡು ಕಲ್ಯಾಣಗಳಿಗೆ ತಾವೇ ಹೊಣೆಯೆಂಬುದನ್ನೂ ಅರಿಯುವರು. ಆದುದರಿಂದ ಶ್ರಮ ಪಡದೆ ಸ್ವಾವಲಂಬಿಗಳಾಗದೆ ಸ್ವಾತಂತ್ರ್ಯದ ಮಧುರ ಫಲಗಳ ದುರ್ಲಭವೆಂಬುದನ್ನೂ ಗುರುತಿಸುವರು. ತಮ್ಮ ಈ ಹಿರಿ ಹೊಣೆಯನ್ನು ಸೊಗಸಾಗಿ ನೆರವೇರಿಸಲು ಅವಶ್ಯಕವಾದ ಅಡಳಿತದ ರೀತಿನೀತಿಗಳ, ಆರ್ಥಿಕ ವಿಧಿವಿಧಾನಗಳ ವಿವರಗಳನ್ನೂ ತಿಳಿಯುತ್ತಿಸುವರು. ಜನಸಾಮಾನ್ಯರ ರಾಜಕೀಯ ರಂಗದ ವ್ಯವಹಾರ ಜ್ಞಾನವು ಬೆಳೆದ ಬಳಿಕ ಚುನಾವಣೆಗಳಲ್ಲಿ ಲಂಚ ವಂಚನೆಗಳಿಗೆ ಪುರಸ್ಕಾರ ಸಿಕ್ಕುವುದು ಕಡಿಮೆಯೊಗುವುದು. ಸಮಾಜ ಸಮಾನಾವಕಾಶಗಳಿಂದ ಎಲ್ಲರ ಏಳ್ಗೆಯೆಂಬುದು ಆದರ್ಶವಾದಾಗ ಹೊಟ್ಟೆ–ಬಟ್ಟೆ ಬಿಡಾರಗಳು ಎಲ್ಲರಿಗೂ ಸಾಕಷ್ಟು ದೊರೆಯಬೇಕೆಂಬುದು ಅಡಳಿತದ ದೃಷ್ಟಿಯೊಗುವಾಗ ಜಾತೀಯತೆಯ ಜ್ವಾಲಾಮುಖಿಯು ನಂದಿಹೋಗುವುದು. ಓಟಿನ ಪೆಟ್ಟಿಯು ತುರುಸು ಹೊಸ ದಾರಿಯನ್ನು ಹಿಡಿಯುವುದು. ಆಗ ಚುನಾವಣೆಗಳು ಚೈತನ್ಯಕಾರಿಯೊಗುವವು

'ನವಯುಗ'

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ,

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಮೆಜಾನ್ಜರ್.

ರಾಜಕೀಯವನ್ನು ಅಂತಃಕಲಹದ ಕೆಸರಿನಿಂದ ಮೇಲೆತ್ತಿರಿ.

ಉಮೇದುವಾರರ ಹಾಗೂ ಪ್ರಚಾರಕರ ಕರ್ತವ್ಯ.

ಲೇ:—"ಗುಪ್ತ" ಮಡಿಕೇರಿ.

ಕೊಡಗಿನಲ್ಲಿ ಚುನಾವಣೆ ಹತ್ತಿರ ಬಂದಷ್ಟೂ ಅತಿಶಯವಾದ ಕಲಹಪ್ರಿಯತೆಯೇ ರಾಜಕೀಯರಂಗದಲ್ಲಿ ಹೊಸಚೇತನ ತೋರಿಬರುತ್ತಿದೆ. ಅಲ್ಲಲ್ಲಿ ವಿಘಟಿಂಗಗಳು, ಭಾಷಣಗಳು ಕೇಳಿಬರುತ್ತವೆ. ಚುನಾವಣೆಗೆ ನಿಂತ ಉಮೇದುವಾರರು ಬಿರುಸಾಗಿ ಕೆಲಸ ಪ್ರಾರಂಭಿಸಿದ್ದಾರೆ. ಕಾರುಗಳೂ, ಜೀಪುಗಳೂ ಹಳ್ಳಿಯ ಕಡೆ ಓಡಾಡುತ್ತಿವೆ. ಇದೆಲ್ಲಾ ಆಗಬೇಕಾದುದೆ! ದೇಶದ ಮತದಾರರನ್ನು ಜಾಗೃತಿಗೊಳಿಸಿ ತಾವು ಚುನಾವಣೆಗೆ ನಿಂತ ಗುರಿಯನ್ನೂ ತಮ್ಮ ಸೇವಾಕಾಂಕ್ಷೆಯನ್ನೂ ವ್ಯಕ್ತಪಡಿಸಿ ಜನತೆಯ ಮತ ಯಾಚನೆ ಮಾಡುವ ಕೆಲಸವು ಸಾಧಕಣಾ ಚುನಾವಣೆಗಳಲ್ಲಿ ಅವಶ್ಯ ಆಗಬೇಕಾದ ಕಾರ್ಯಕ್ರಮಗಳ ಅಂಗ. ಕೊಡಗಿನಲ್ಲಿರುವ ಸ೮೫,೦೦೦ ಮತದಾರರಲ್ಲಿ ಬಹುಮಂದಿ ಯರು ಅವಿದ್ಯಾವಂತರು. ನೂರಕ್ಕೆ ಐಂಭತ್ತು ಜನರು ಅವಿದ್ಯಾವಂತರೆಂದರೆ ಅತ್ಯುಕ್ತಿಯಲ್ಲ. ಇಂಥಾ ಅವಿದ್ಯಾವಂತ ಮತದಾರರು ತಮ್ಮ ಓಟಿನ ಸದುಪಯೋಗಕ್ಕೆ ಕಳಿಸಬೇಕಾದರೆ ನ್ಯಾಯಯುಕ್ತವಾದ ಪ್ರಚಾರವೂ, ಸತ್ಯದೃಷ್ಟಿಯ ವರ್ತನೆಯೂ ಪ್ರಚಾರಕರಲ್ಲೂ, ಉಮೇದುವಾರರಲ್ಲೂ ಇರಬೇಕು. ತಿಳಿಯದ ಜನರಿಗೆ ತಿಳಿಯ ಹೇಳುವದು ತಿಳಿದವರ ಕರ್ತವ್ಯವಲ್ಲದೆ ಅಡ್ಡದಾರಿಯಿಂದ ಜಯಪಡೆಯಲೆತ್ನಿಸುವದೇ ಸರ್ವಸ್ವವಲ್ಲ. ಬಹು ಜನರು ತಮ್ಮ ಸಾಗರೀಕ ಹಕ್ಕು ಬಾಧ್ಯತೆಗಳನ್ನು ತಿಳಿಯದವರಾಗಿ ತಮಗೆ ಬಂದಿರುವ ಮತ ವೃತ್ತದರ ಮಹತ್ವವನ್ನು ಅರಿಯದವರಾಗಿರುವಾಗ ಅದನ್ನು ತಿಳಿಸಿ ಅದರ ಸದುಪಯೋಗವಾಗುವಂತೆ ಮಾಡುವದು ಪ್ರತಿಯೊಬ್ಬನ ಕರ್ತವ್ಯ. ಫ್ರೌಢ ಮತದಾನ ಪದ್ಧತಿಯು ಸರಿಯಾಗಿ, ದೇಶಹಿತಕಾರಕವಾಗಿ ಕೆಲಸ ಮಾಡಬೇಕಾದರೆ ಜನರಲ್ಲಿ ತಮ್ಮ ಹಕ್ಕು ಬಾಧ್ಯತೆಗಳ ಅರಿವಿರಬೇಕು. ಜನತೆಯಲ್ಲಿ ರಾಜಕೀಯ ಜ್ಞಾನವಿರಬೇಕು. ದೇಶದ ರಾಜಕೀಯ ಪಕ್ಷಗಳೆಂತವು, ಅವುಗಳ ಗುರಿಗಳೇನು ಎಂಬ ಅರಿವಿರಬೇಕು. ಮತದಾರನು ವಿದ್ಯಾವಂತನೂ, ರಾಜಕೀಯ ವಿಚಾರಗಳನ್ನು ತಿಳಿಯಲು ಶಕ್ತಿ ಇರುವವನೂ ಆಗದಿದ್ದರೆ ಅತನ ಮತದ ಬಳಕೆಯೋಗವಾಗಿ ಪ್ರಜಾತತ್ವವು ಕೊಲೆಮಾಡಲ್ಪಡುವದು. ತನ್ನ ಓಟಿನ ಮಹತ್ವವನ್ನು ತಿಳಿಯದವನು ಮತವನ್ನು ನೆಂಟನೆಂಬ ಕಾರಣಕ್ಕೋ, ಜಾತಿಯವನೆಂಬ ಪ್ರೀತಿಗೋ, ದುಡ್ಡಿನ ಆಸೆಗೋ, ಅಧಿಕಾರದ ವ್ಯಾಮೋಹಕ್ಕೋ ಕೊಟ್ಟುಬಿಡುವನು. ಅನೇಕರು ತಮ್ಮ ಮೇಲಿನ ಅಧಿಕಾರಿಯ ಯಜಮಾನನ ಅಜ್ಞೆಯಂತೆ ತನ್ನ ಮತವನ್ನೀಯುವರು. ಇದೆಲ್ಲವೂ ಮತದ ದುರುಪಯೋಗವಾದರೆ ದೇಶದ ಮತದ ದುರುಪಯೋಗವಾದರೆ ದೇಶದ ಅವನತಿಯು ನಿಶ್ಚಿತವಾಗಿದೆ.

ಪ್ರಜಾಪ್ರಭುತ್ವ ಉಳಿಯುವದೂ, ಆಳಿಯುವದೂ ಮತದಾರರಾದ ನಮ್ಮ ಯೋಗ್ಯತೆಯ ಮೇಲೆ ನಿಂತಿದೆ. ಆದ್ದರಿಂದಲೇ ದೇಶದ ಜನರ ಯೋಗ್ಯತೆಗೆ ಸರಿಯಾದ ಸರಕಾರ ಆವರಿಗೆ ದೊರೆಯುವದೆನ್ನುವದಾಗಿದೆ. ಆ ಕಾರಣ ನಾವು ಉಮೇದುವಾರರಿರಲಿ, ಏಜಂಟರಿರಲಿ, ಪ್ರಚಾರಕರಿರಲಿ ಪ್ರತಿಯೊಬ್ಬನೂ ನಮ್ಮ ನಮ್ಮ ಜವಾಬ್ದಾರಿಯನ್ನು ತಿಳಿದು ಮತದಾರರನ್ನು ಜಾಗೃತಿಗೊಳಿಸಬೇಕು. ದೇಶದ ಹಿತ ಬಯಸುವವರೆಲ್ಲರ ಕರ್ತವ್ಯ ವಿದು. ಆದರೆ ಕೊಡಗಿನಲ್ಲಿ ಆಗುತ್ತಿರುವ ಪ್ರಚಾರವೆಂಥಾದ್ದು?

ಚುನಾವಣೆಗೆ ನಾನೂ ಒಬ್ಬ ಉಮೇದುವಾರನಾಗಿ ಹಲ ಕೆಲವು ವಿಘಟಿಂಗುಗಳಿಗೆ ಹೋಗಿದ್ದೇನೆ. ಹಲವು ಸಭೆಗಳಲ್ಲಿ ಕೊಡಗಿನ ಪ್ರತ್ಯೇಕವಾದಿ ಮತ್ತು ಸಂಯೋಜನಾವಾದಿ ಪಕ್ಷಗಳು ವಾದಿಸುವದನ್ನು ಕಂಡಿದ್ದೇನೆ ಆದರೆ ಇವರ ವಾದ ವಿವಾದಗಳು ದೇಶದ ಜನರ ಹಿತದೃಷ್ಟಿಯಿಂದ ಯೋಗ್ಯವಾಗಿಲ್ಲ. ದೇಶದಲ್ಲಿ ಪಕ್ಷಗಳು ಬೇಕು. ನಿಜ. ರಾಜಕೀಯದಲ್ಲಿ ಎರಡು ಪಕ್ಷವಿಲ್ಲದಿದ್ದರೆ ಪ್ರಜಾಪ್ರಭುತ್ವವು ಸರಿಯಾಗಿ ಕೆಲಸ ಮಾಡಲಾರದು. ಆದ್ದರಿಂದ ಪಕ್ಷಗಳು ಅತ್ಯಗತ್ಯ ಆದರೆ ಪಕ್ಷಗಳು ತತ್ವಗಳ ಮೇಲೆ ಕಟ್ಟಲ್ಪಟ್ಟಿರಬೇಕಲ್ಲದೆ ವ್ಯಕ್ತಿವಿರೋಧದ ತಳಹದಿಯಿಂದಾಗಿರಕೂಡದು. ತತ್ವಗಳನ್ನು ಚರ್ಚಿಸಿದಷ್ಟು ಹಿತ. ವಿಚಾರಗಳನ್ನು ವಿಮರ್ಶಿಸಿದಷ್ಟು ಜನರಿಗೆ ಸಹಾಯಕ, ಆದೃಷ್ಟಿಯಿಂದ ಕೊಡಗಿನಲ್ಲಿರುವ ಇಂದಿನ ಪ್ರತ್ಯೇಯಾದ ಕೊಡಗಿನ ಸಂಯೋಜನೆ ಯೂ ಪ್ರತ್ಯೇಕತೆಯು ವಿಚಾರ ಚರ್ಚಿಸಲ್ಪಡಲಿ. ಪ್ರತ್ಯೇಕವಿದ್ದರೆ ಜನಹಿತ ಹೀಗೆ ಆಗುತ್ತದೆ. ಸಂಯೋಜನೆಯಾದರೆ ಹೀಗಿದೆಯೆಂದು ಅಂಕೆ ಸಂಕೆಗಳನ್ನು ಕೊಟ್ಟು ವಾದಿಸಲಿ. ಮುಂದಿನ ಶಾಸನ ಸಭೆಯು ಅಧಿಕಾರ ಹೀಗಿದೆ, ಜನತೆಯ ಹಕ್ಕು ಇಷ್ಟಿದೆಯೆಂಬುದನ್ನು ವಿವರಿಸಲಿ. ಆದರೆ ಆ ವ್ಯಕ್ತಿಯು ನಡತೆ ಇಂಥಾದ್ದು. ಇಂಥಾವನು ಹೀಗೆ ಅನ್ಯಾಯಮಾಡಿದ್ದಾನೆ ಎಂದು ಯಾರೂ ವ್ಯಕ್ತಿಗತವಾಗಿ ವಾದಿಸದಿರಲಿ. ಕೊಡಗು ರಾಜಕೀಯವು ಈ ವ್ಯಕ್ತಿ ದೂಷಣೆ, ಕುಟಿಲ ರಾಜಕೀಯದಿಂದ ಕುಲುಷಿತವಾಗಿ ಹೇಸಿಗೆಯ ಆಗರವಾಗಿದೆ. ಆದನ್ನು ಪರಿಶುದ್ಧಗೊಳಿಸಿ ರಾಜಕೀಯವು ವ್ಯಕ್ತಿದೂಷಣೆಯ ಹೊಲಸಿನಲ್ಲಿ ಕೊಳೆಯುದಂತೆ ಮೇಲೆತ್ತುವುದು ಪ್ರತಿಯೊಬ್ಬನ ಕರ್ತವ್ಯ. ಕೊಡಗಿನ ಮುಂದಾಳುಗಳೆನ್ನುವ ಮಹನೀಯರು ಸೇರಿದ ಹಲವು ಚುನಾವಣಾ ವಿಘಟಿಂಗುಗಳಿಗೆ ಹೋಗಿರುವೆನು. ಈ ಮುಂದಾಳುಗಳಲ್ಲೇ ಶಿಸ್ತು ಇಲ್ಲ; ಸಭೆ ಹೇಗೆ ನಡೆಯಬೇಕೆಂಬುದರ ಅರಿವಿಲ್ಲ. ಅಧ್ಯಕ್ಷರಿಗೆ ಯಾವ ಗೌರವ ಕೊಡಬೇಕೆಂಬುದರ ಪರಿವೆಯಿಲ್ಲ. ಸಿಟ್ಟಿದ್ದ ಪ್ರಾಣಿಗಳಂತೆ ಕೂಗುತ್ತಾರೆ, ಅರಚುತ್ತಾರೆ. ಇದನ್ನು ಯಾವ ರಾಜಕೀಯವೆನ್ನೋಣ?

ಈ ರಾಜಕೀಯ ಸಭೆಗಳನ್ನು ತನ್ನ ನೈಸರ್ಗಿಕ ಮುಗ್ಧತೆಯಿಂದ ನೋಡುವ ವೈತನಿಗೆ ಆಶ್ಚರ್ಯವಾಗಲೇಬೇಕು. ಏನು ಕಾರಣಕ್ಕಾಗಿ ಈ ಮುಂದಾಳುಗಳು ಹೀಗೆ ಕಚ್ಚಾಡಿಕೊಳ್ಳುತ್ತಾರೆ ಎಂಬುದು ಅವರಿಗೆ ಅರಿವಾಗದೆ ನಾನಾ ಕಲ್ಪನೆಗಳನ್ನು ಹೊಡಬೇಕಾಗುತ್ತದೆ ಕೌನ್ಸಿಲುಮೆಂಬರಾದರೆ ಏನೋ ಲಾಭವಿದೆಯೆಂಬ ಭಾವನೆ ಅಸಥಳ್ಳಿ ಬಂದೇ ಇರುತ್ತದೆ. ಉಮೇದುವಾರರೂ ಕೂಡ ಈ ಮೂಲಕ ಏನೋ ಲಾಭಬರುತ್ತದೆ, ಹೆಸರು ಬರುತ್ತದೆ, ಘನತೆ ಬರುತ್ತದೆಂದು ವರ್ತಿಸುವಂತೆ ತೋರುವದೇ ವಿನಾ ಅದು ಜನರ ಸೇವಾಮಾರ್ಗ, ನಾನು ಮೆಂಬರನಾಗುವದೆಂದರೆ ಜನರ ಸೇವಕನಾಗುವದೆಂಬ ಭಾವನೆಯಿಂದ ವರ್ತಿಸುವವರು ಬಹು ವಿರಳ. ನಿಜವಾಗಿಯೂ ಹೃದಯ ಪರಿವರ್ತನೆ ಹೊಂದಿ, ಜನಸೇವೆಯೇ ಜನಾರ್ಧನನ ಸೇವೆಯೆಂದು ಬಗೆದವರಾರೂ ಶಾಸನ ಸಭೆಗೆ ಜನಸೇವೆಗೆಂದು ನುಗ್ಗಲಾರರು. ಅಂಥಾವರು ಭರತದಲ್ಲಿ ಬಹುಮಂದಿ ಇರಲಾರರು. ಒಬ್ಬ ಮಹಾತ್ಮಗಾಂಧಿಯೋ ಒಬ್ಬ ಆಚಾರ್ಯ ವಿನೋಬರೋ ಹೀಗೆ ವಿರಳಿಯಕ್ಕೊಬ್ಬರು! ಇಷ್ಟು ದೃಢ ವಿಶ್ವಾಸವಿಲ್ಲದ ಕೆಲವು ಸೇವಾಕಾಂಕ್ಷಿಗಳೂ ಶಾಸನ ಸಭೆಗೆ ನುಗ್ಗುವರು. ಅವರ ಭಾವನೆಯಲ್ಲಿ ಜನತೆಗೆ ಹಿತಮಾಡಬೇಕು; ಅವರ ಸೇವೆ ಮಾಡಬೇಕೆಂಬ ತವಕವಿದ್ದರೂ ಅದಕ್ಕೆ ಸರಿಯಾದ ಪುರಸ್ಕಾರ, ಗೌರವ ದೊರೆಯದಿದ್ದರೆ ಅವರು ಮುಂಬರಲಾರರು. ಗೌರವ ಕೊಟ್ಟು ಬೆನ್ನುತಟ್ಟಿ ನೀನು ಮಾಡೆಂದು ಬಿಟ್ಟರೆ ಆತ್ಮತೃಪ್ತಿಯಿಂದ ಜನರಿಗಾಗಿ ಅವರು ದುಡಿಯುತ್ತಾರೆ. ಅಂಥಾವರು ಸಾವಿರಕ್ಕೊಬ್ಬ ಇರಬಹುದು. ಅಂಥಾವರಿದ್ದರೆ ಅವರಿಗೆ ಬೆಂಬಲವೀಯುವದು ಸರ್ವರ ಕರ್ತವ್ಯ. ಅವರಿಗೆ ಕೊಟ್ಟ ಪ್ರೋತ್ಸಾಹವೂ, ಸಹಾಯವೂ ನಿಷ್ಪಾರ್ಥಕವಾಗಲಾರದು. ಆದರೆ ಚುನಾವಣಾರಂಗದಲ್ಲಿ ಪ್ಲೇಪೋಟಿಗಿಳಿದಿರುವ ನಮ್ಮಲಿ ಬಹುಮಂದಿಯರು ಸೇವಾದೃಷ್ಟಿಯಿಂದ ನಿಂತವರಲ್ಲ. ಹೆಸರಿಗಾಗಿ, ಘನತೆಗಾಗಿ, ಹೊಗಳಿಕೆಗಾಗಿ ನಿಂತವರು. ಹೀಗೆನ್ನುವಾಗ ಯಾರೂ ಸಿಟ್ಟುಗಾರದು. ಕೊಡಗಿನ ಶಾಸನ ಸಭೆಯ ಗತ ೩೬ ವರ್ಷಗಳ ಚರಿತ್ರೆಯನ್ನು ನೋಡಿದರೆ ಜನಸೇವೆಯ ದೃಷ್ಟಿಯಿಂದ. ಕೌನ್ಸಿಲಿಗೆ ಬಂದವರು ಒಬ್ಬಿಬ್ಬರಾದರೆ ಹೆಸರಿಗಾಗಿ ಬಂದವರು ಹಲವಾರು ಇಲ್ಲದಿದ್ದರೆ ಚುನಾವಣೆಯ ಕಾಲಕ್ಕೆ ಓಟು ಪಡೆಯಲು ಮನೆ ಮನೆ ತಿರುಗಿದವನು ಕಾನು ಗೆದ್ದ ನಂತರ ಹಳ್ಳಿಯ ಕಡೆ ತಿರುಗದಿರುವದರ ಕಾರಣವೇನು? ಬಡ ರೈತನಿಗೆ ವರ್ಷಕ್ಕೆ ಕೇವಲ ೪೫ ಐಟ್ಟ ಒತ್ತಾಸಾಕೆಂದು ಸರಕಾರವು ಸಿಡುಮಮಾಡಲು ಜನ ಪ್ರತಿನಿಧಿಗಳನ್ನು ಕೇಳಿದಾಗ ನಿಜವಾದ ಪ್ರತಿನಿಧಿಯು ಈ ವಿಚಾರದಲ್ಲಿ ತನಗೆ ಓಟು ಕೊಟ್ಟ ರೈತನ ಕೇಳಿ ಅವನ ಅಭಿಪ್ರಾಯವನ್ನು ರೈತರಿಗೆ ತಿಳಿಸಬೇಕಿರಲಿಲ್ಲವೇ? ಅಕ್ಕಿ ಮಾಡಲಿಕ್ಕಾಗಿ ಗ್ರಾಮದಿಂದ ಬತ್ತ ಹೊರಗೆ ಸಾಗಿಸಲು ಲೈಸೆನ್ಸ್ ಬೇಕೆಂಬ ಲಜ್ಜೆಜಾರಿಗೆ ತರಲೆತ್ನಿಸಿದಾಗ ದೇಶದೊಳಗೆ ಈ ದೇಶನಿಗ್ರಹ ಜಗತ್ತಿನಲ್ಲಿಲ್ಲವೆಂದೂ, ದೇಶದಿಂದ ಹೊರಗೆ ಸಾಗಿಸಲಿವಾಗ ಮಾತ್ರ ಲೈಸೆನ್ಸ್ ಬೇಕೆಂದೂ ಪ್ರತಿನಿಧಿಗಳು ಹೋರಾಡಬೇಕಿರಲ್ಲವೇ? ರೈತನ ಓಟು ಪಡೆದು ಆರಿಸಲ್ಪಟ್ಟ ಪ್ರತಿನಿಧಿಯು ರೈತನ ವಿಚಾರ ಅತೋಚಿಸದೆ, ಅತನ ಕಷ್ಟ ಸುಖಗಳನ್ನು ಅರಿತುಕೊಳ್ಳದೆ ಅತನನ್ನು ಮರೆತು ಬಿಟ್ಟರೆ ಅತನು ನಿಜವಾಗಿಯೂ ರೈತರ ಪ್ರತಿನಿಧಿಯೆಂದು ಹೇಗೆ ಕರೆಯೋಣ? ಹಲವಾರು ವರ್ಷಗಳಿಂದ ನಮ್ಮ ಕೌನ್ಸಿಲಿನಲ್ಲಿ ಆನೇಕರು ಪ್ರತಿನಿಧಿಗಳಾಗಿದ್ದರು. ಎಷ್ಟು ಪ್ರತಿನಿಧಿಗಳು ಜನರನ್ನು ಪ್ರಶ್ನಿಸಿ, ಅವರ ಕಷ್ಟಗಳನ್ನು ವಿಚಾರಿಸಿ, ರೈತರು ಬೇಕು ಬೇಡಿಕೆಗಳನ್ನು ಪರಿಶೀಲಿಸಿ ಅವುಗಳನ್ನು ಒದಗಿಸಿ ಕೊಡಲು ಕೌನ್ಸಿಲಿನಲ್ಲಿ ಹೋರಾಡಿದ್ದಾರೆ ಹಿಂದಿನ ಲೆಜಿಸ್ಲೇಟಿವ್ ಕೌನ್ಸಿಲಿಗೆ ಸಾಕಷ್ಟು ಅಧಿಕಾರವಿರಲಿಲ್ಲವೆನ್ನುವದು ನಿಜ, ಆದರೆ ಪ್ರತಿನಿಧಿಯು ತನ್ನ ಪಾಲಿನ ಕರ್ತವ್ಯ ಮಾಡಲು ಅದು ಎಂದೂ ಬಾಧಕವಿರಲಿಲ್ಲ. ಜನತೆಯು ಕೂಗು ಸರಿಯಾಗಿ ಸರಕಾರದ ಮುಂದೆ ಇಡಲ್ಪಟ್ಟಿದ್ದರೆ ಹಿಂದಿನ ಶಿಫಾರಸ್ಸಿನ ಕೌನ್ಸಿಲಿನಲ್ಲೂ ಸಾಧ್ಯವಾಗಿದ್ದ ಅನೇಕ ಹಿತಕಾರ್ಯಗಳಿದ್ದವು.

ಆದ್ದರಿಂದ ಒಂದು ದೇಶದ ಕಾರ್ಯದಲ್ಲಿ ವ್ಯಕ್ತಿತ್ವವನ್ನು ಗಣಿಸುವದು ಕ್ಷುಲ್ಲಕ. ಒಂದು ಸಾರ್ವಜನಿಕ ಸಭೆಯಲ್ಲಿ ವ್ಯಕ್ತಿ ದೂಷಣೆ ಮಾಡುವದು ಯೋಗ್ಯತೆಯಲ್ಲ. ಪ್ರತಿಯೊಬ್ಬನೂ ತತ್ವಕ್ಕಾಗಿ ಹೋರಾಡಬೇಕು. ಸೇವೆಗಾಗಿ ಸ್ಪರ್ಧೆ ನಡೆಯಬೇಕು. ಈ ರೀತಿಯ ಉದಾತ್ತ ಭಾವನೆ ನಮ್ಮಲ್ಲಿ ಬರುವಂತೆ ಮುಂದಾಳುಗಳು ಮಾರ್ಗದರ್ಶಕರಾಗಬೇಕು. ಆದರಿಂದ ಇನ್ನಾದರೂ ಕೊಡಗಿನ ರಾಜಕೀಯ ಪಕ್ಷಗಳು ತಮ್ಮ ಹೇಸಿಗೆಯಂತ ಅಂತಕಲಹದ ಕೊಳಕನ್ನು ಸಾರ್ವಜನಿಕ ವೇದಿಕೆಯಲ್ಲಿ ಒಗೆಯದಿರಲಿ. ಒಂದು ದೇಶದ ರಾಜಕೀಯ ಜೀವನದಲ್ಲಿ ವ್ಯಕ್ತಿಗಳು ನೀರಗುಳ್ಳೆಗಳಂತೆ. ಇಂದು ಇದ್ದವನು ನಾಳೆ ಇರಲಾರನು. ಆದರೆ ತತ್ವಗಳು ಚಿರವಾದವು. ಅಂಥಾ ಚಿರವಾದ ತತ್ವದ ಮೇಲೆ ರಾಜಕೀಯವು ನಿಲ್ಲಿಸಲ್ಪಡಲಿ. ಹಾಗೆ ನಿಂತ ರಾಜಕೀಯವು ವ್ಯಕ್ತಿಗಳ ಉದಯ ಅಸ್ತಮಾನಗಳಿಂದ ವ್ಯತ್ಯಾಸ ಹೊಂದದೆ ಚಿರಂತನವಾಗಿರುವುದು. ಈ ಕಾರಣಕ್ಕಾಗಿ ಕೊಡಗಿನ ಚುನಾವಣಾ ರಾಜಕೀಯದಲ್ಲಿ ವ್ಯಕ್ತಿದೂಷಣೆಯ ಹೊಲಸನ್ನು ತೆಗೆದು ಹಾಕಿ ಅನಾವಶ್ಯದ ಉದ್ರೇಕ ಹಾಗೂ ಹಿಂಸಾ ಸ್ವಭಾವಕ್ಕೆ ಎಡೆ ಕೊಡದೆ ರಾಜಕೀಯವು ಭದ್ರವೂ, ಶಾಂತಿಯುತವೂ ಮತ್ತು ಪವಿತ್ರವೂ ಆದ ತತ್ವಗಳ ಮೇಲೆ ನಿಲ್ಲುವಂತೆ ಮುಂದಾಳುಗಳು ಎಚ್ಚರಿಕೆ ವಹಿಸಬೇಕು.

———

ದೇಶದ ಭವಿಷ್ಯದ ತೀರ್ಮಾನ ಈ ಚುನಾವಣೆಯಲ್ಲೇ ಆಗಲಿ.

ಇನ್ನು ಒಂದೂವರೆ ತಿಂಗಳುಗಳಲ್ಲಿ ಇಂಡಿಯಾ ದೇಶದ ಉದ್ದಗಲಕ್ಕೂ, ಹಾಗೆ ಕೊಡಗಿನಲ್ಲಿಯೂ ಕೂಡ ಚುನಾವಣೆಯು ಪಡೆಯುವುದು. ಇಂಡಿಯಾ ದೇಶದಲ್ಲಿ ಇಲ್ಲಿ ವರೆಗೆ ಪ್ರಾಮುಖ್ಯವಾಗಿದ್ದ ಒಂದೆರಡು ಪಂಗಡಗಳು ಒಡೆದು, ಇಂದು ಅನೇಕ ಪಂಗಡಗಳಾಗಿವೆ. ಪತ್ರಿಕೆಗಳೆಲ್ಲವೂ ಚುನಾವಣೆಯು ಪ್ರಚಾರದಲ್ಲಿಯೇ ತುಂಬಿವೆ. ಪ್ರಚಾರವೆಷ್ಟು, ಅಪಪ್ರಚಾರವೆಷ್ಟು? ಒಂದು ಪಂಗಡಕ್ಕೆ ಪ್ರಚಾರವೆಂದು ಕಂಡು ಬಂದೆಲ್ಲವೂ ಇನ್ನೊಂದು ಪಂಗಡಕ್ಕೆ ಅಪಪ್ರಚಾರ. ಆದರೆ, ಯಾವುದು ಪ್ರಚಾರ, ಯಾವುದು ಅಪಪ್ರಚಾರ; ನ್ಯಾಯ ಅನ್ಯಾಯ; ತತ್ವ ದೂಷಣೆ, ವ್ಯಕ್ತಿ ದೂಷಣೆ, ಯಾರು ಯೋಗ್ಯರು, ಯಾರು ಅಯೋಗ್ಯರ; ಯಾರು ಸ್ವಾರ್ಥತೆಯುಳ್ಳವರು, ಯಾರು ತ್ಯಾಗಿಗಳು ಎಂದು ದೇಶದ ಮಹಾಜನರೇ ಅಂತ್ಯದ ಅಭಿಪ್ರಾಯ ಪಡಬೇಕಾಗಿದೆ.

ಅದಕ್ಕನುಗುಣವಾಗಿಯೇ ದೇಶದ ವ್ಯಕ್ತಿಗಳೂ, ಪಂಗಡಗಳೂ ಅವರವರ ತತ್ವಗಳನ್ನು ವಿವೇಚನೆ ಎತ್ತಿಹಿಡಿಯುವುದೇ ಕಾಗಿದೆ. ಅಂತ್ಯದಲ್ಲಿ ಉಳಿಯಬೇಕಾದುದು ದೇಶ. ವ್ಯಕ್ತಿಗಳೂ, ಅವರು ಪಡೆದುದೆಲ್ಲವೂ ಅಳಿಯುವುದು. ದೇಶದ ಜನರಿಗೆಲ್ಲಾ ತೃಪ್ತಿಪಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಲ್ಲಾ ಪ್ರಶ್ನೆಗಳೂ, ಅವುಗಳನ್ನು ಬಗೆಹರಿಸುವ ವಿಧಾನಗಳೂ ಯಾವಾಗಲೂ ಭಿನ್ನಾಭಿಪ್ರಾಯವನ್ನು ತರುತ್ತವೆ. ಅಂದ ಮಾತ್ರಕ್ಕೆ ಯಾವ ವ್ಯಕ್ತಿಯೂ, ತನ್ನ ಮನಸಾಕ್ಷಿಗೆ ವಿರೋಧವಾಗಿ, ಬರೀ ಜನರನ್ನು ತೃಪ್ತಿಪಡಿಸುವುದಕ್ಕಾಗಿ ತನ್ನ ಅಭಿಪ್ರಾಯಗಳನ್ನು ಜನರಿಗೆ ಅನುಕೂಲವಾಗುವಂತೆ ಬದಲಾಯಿಸುವುದು ಅಯೋಗ್ಯವು. ಬದಲಾಗಿ ಮಹಾ ಜನತೆಯನ್ನು ತನ್ನ ಅಭಿಪ್ರಾಯಕ್ಕೆ ಸೆಳೆಯಬೇಕು.

ಹೇಗೂ ದೇಶದ ಉದ್ದಗಲಕ್ಕೂ ಅನೇಕ ಪಂಗಡಗಳು ಜನಿಸಿದೆ, ಜನರು, ಅರುವ ಚುನಾವಣೆಯಲ್ಲಿ ತೋರಿಸುವ ಉತ್ಸಾಹವು, ದೇಶದ ಶೀಘ್ರಚಿನ್ನೆಯಾಗಿವೆ. ಬೇಗನೇ ಈ ಉತ್ಸಾಹವು ತಣ್ಣಗಾಗಿ ಪಂಗಡಗಳು ತಮ್ಮ ನಿಜಸ್ಥಿತಿಯನ್ನು ಅರಿತು. ಅಂತ್ಯದಲ್ಲಿ ಮುಖ್ಯ ಎರಡು ಪಂಗಡಗಳಾಗಿ ನೆಲೆಯಾಗಿ, ಇಂಡಿಯಾ ದೇಶದ ಉದ್ದಗಲಕ್ಕೂ ಪ್ರಜಾಬ್ಧಾರಿ ಸರಕಾರದ ಉತ್ತಮ ಬೆಳವಣಿಗೆಗೆ ಆಸ್ಪದ ದೊರೆಯುವುದರಲ್ಲಿ ಸಂಶಯವಿಲ್ಲ.

ನಾವು ಈಗ ಕೊಡಗಿನಲ್ಲಿರುವಾದರಿಂದ, ಕೊಡಗಿನ ಇಂದಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸೋಣ. ಕೊಡಗಿನಲ್ಲಿ ಇಂದು ಎರಡು ರಾಜಕೀಯ ಪಂಗಡಗಳು ಇವೆ. ಸಂಯೋಜನವಾದಿ ಪಕ್ಷ, ಮತ್ತು ಪ್ರತ್ಯೇಕವಾದಿ ಪಕ್ಷ. ಈ ಎರಡು ಪಂಗಡಗಳು ಇವೆಯೆಂಬಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸ್ ಕಮಿಟಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಸಹ ಒಪ್ಪಿದವರಾಗಿದ್ದಾರೆ—"There seems to be two groups, one standing for the merger of Coorg and the other against it–Sri Nijalingappa.

ಲೇ:—ಶ್ರೀ ಕೆ. ಎಂ. ಪೂವಯ್ಯ.

1) ಈಗ ಕಾಂಗ್ರೆಸ್ಸಿನ ಆಶ್ರಯದಲ್ಲಿರುವ ಸಂಯೋಜನವಾದಿ ಪಕ್ಷವು ಕೊಡಗಿನ ಭವಿಷತ್ತಿನ ತೀರ್ಮಾನವು ಈ ದೇಶದ ಮಹಾಜನರಲ್ಲಿಲ್ಲವೆಂದು ವಾದಿಸಿದವರು, ಇನ್ನೂ ವಾದಿಸಲಿರುವವರು. ಮತ್ತು ಕೊಡಗು ಪ್ರತ್ಯೇಕವಾಗಿರಲು ಸಾಧ್ಯವಿಲ್ಲವೆಂದು ನಂಬುವವರು.

2) ಈಗ ಕಾಂಗ್ರೆಸ್ಸಿನ ಆಧೀನದಿಂದ ಹೊರನಿಂತಿರುವ ಪ್ರತ್ಯೇಕವಾದಿ ಪಕ್ಷ—ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ಸಿನ ಅಧಿಕಾರಿಗಳ, ಪದೇ ಪದೇ ಅನ್ಯಾಯವೆಂದು ಕಂಡು ಬಂದಂತಹ, ಈ ನಮ್ಮ ಕೊಡಗು ದೇಶಕ್ಕೆ ಹಾನಿಕರವಾಗುವಂತಹ ವರ್ತನೆಗಳಿಂದ ತಪ್ಪಿಸಿಕೊಳ್ಳುವರೆ, ಕಾಂಗ್ರೆಸ್ಸ ಮಹಾ ಸಂಸ್ಥೆಯ ಮಿತ್ರರಾಗಿಯೇ, ಕಾಂಗ್ರೆಸ್ಸಿನ ಮಹಾತತ್ವಗಳಿಗೆ ಒಳಪಟ್ಟವರಾಗಿಯೇ, ಯಾವ ದೇಶದ ಭವಿಷತ್ತನ್ನೂ ನಿರ್ಧಾರ ಪೂಡುವ ಹಕ್ಕು (The principle of self determination) ಆ ದೇಶದ ಮಹಾ ಜನರಿಗೆ ಕೂಡಿದ್ದಾಗಿದೆ ಎಂದು ಸಂಪೂರ್ಣನಂಬಿ ಆದಕ್ಕೋಸ್ಕರ ಪೂಡಿಯಲು ನಿಂತು, ಕಾಂಗ್ರೆಸ್ಸ ಒಂದು ಪಕ್ಷದ ಬೆನ್ನುತಟ್ಟಿ ತೊಡಗಿ ಆದಕ್ಕನುಗುಣವಾಗಿ ಉನೇದು ವಾರರನ್ನು ನಿಲ್ಲಿಸಿದ ಕಾರಣ, ಕಾಂಗ್ರೆಸ್ಸಿನ ಶಿಸ್ತಿಗೆ ತಲೆ ಬಾಗಿ ಕಾಂಗ್ರೆಸ್ಸಿಗರಾಗಿಯೇ ಕಾಂಗ್ರೆಸ್ಸಿನಿಂದ ಸೂರಬಂದವರಾಗಿದ್ದಾರೆ. ಇವರು ಕೊಡಗು ದೇಶವು ಪ್ರತ್ಯೇಕ ನಿಲ್ಲಲು ಸಂಪೂರ್ಣಸಾಧ್ಯವಿದೆ ಎಂದು ನಂಬುವವರಾಗಿದ್ದಾರೆ.

ಪರೀಕ್ಷಿಸಿ ನೋಡಿದರೆ, ಈ ಎರಡು ಪಂಗಡಗಳ ತತ್ವಗಳು, ಅವರೊಳಗೆ ಹೆಚ್ಚಾಗಿ ವಿರೋಧವಾಗಿರುವುದರಿಂದ, ಖಂಡಿತವಾಗಿಯೂ ಈ ಸಂಗತಿಗಳಲ್ಲಿ ದೇಶದ ಮತದಾರರಿಗೆ ಸರಿಯಾಗಿ ತಿಳಿವಳಿಕೆ ಕೊಡಲು, ಮತ್ತು ಮುಂದಿನ ರಾಜ್ಯಾಡಳಿತಕ್ರಮವನ್ನು ನಡೆಸಲು ಸಹ ಅನುಕೂಲವಾಗುವಂತೆ ಒಂದಕ್ಕೊಂದು ಪಂಗಡಕ್ಕೆ ವಿರೋಧವಾಗಿ ಖಂಡಿತವಾಗಿಯೂ ಚುನಾವಣೆಗೆ ನಿಲ್ಲಲೇ ಬೇಕಾಯಿತು. ರಾಜಕೀಯ ರಣರಂಗದಲ್ಲಿ ತತ್ವಗಳೇ ತಲೆಎತ್ತಿ ನಡೆಯಬೇಕಲ್ಲದೆ ವ್ಯಕ್ತಿ, ಯಾವ್ಯಕ್ತಿಯಲ್ಲ. ಇಂತಹ ಮಹತ್ತಾದ ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡು, ಈ ಪ್ರಶ್ನೆಯನ್ನು ಈ ಚುನಾವಣೆಯಲ್ಲಿ ಒಂದು ಪ್ರಾಮುಖ್ಯದ ಪ್ರಶ್ನೆಯಾಗಿ ಮಾಡಬಾರದೆಂಬ ಕೋರಿಕೆಗೆ ಅರ್ಥವೇ ಇಲ್ಲ. ಮೂಲ ತತ್ವಗಳೆಲ್ಲಿ ಒಪ್ಪಂದಕ್ಕೆ ಬರುವುದೆಂದರೆ ಪ್ರಜಾ ಜವಾಬ್ದಾರಿ ಸರಕಾರದ ಕೊಲೆ ಮಾಡಿದಂತೆ.

ಇವುಗಳ ಮಧ್ಯೆ ಕೆಲವು ಮಹನೀಯರು, ನಾವೂ ಕೂಡ ಸಂಯೋಜನಕ್ಕೆ ಸಂಪೂರ್ಣ ವಿರೋಧ, ನಾವೂ ಕೂಡ ಪ್ರತ್ಯೇಕವಾದಿಗಳೇ ಎಂಬುದಾಗಿ ಈಗ ಹೇಳಿ ಸಂಯೋಜನಾ ಪಕ್ಷದ ಪರವಾಗಿ, ಪ್ರತ್ಯೇಕವಾದಿಗಳಿಗೆ ವಿರೋಧವಾಗಿ ಚುನಾವಣೆಗೆ ನಿಂತಿದ್ದಾರೆ. ಇದು ತತ್ವಪೇಕ್ಷವೋ ಯಾ ವ್ಯಕ್ತಿಪೇಕ್ಷವೋ ಅರಿಯಲಾರದು! ಕಾಂಗ್ರೆಸ್ಸಿನಿಂದ ಈಗ ಕಾಣೆ ಹೊರಬಂದ ಮಹನೀಯರು ತಮ್ಮ ಅನುಭವವನ್ನು ದೇಶದ ಮುಂದೆ ಸಾರಿ ಸಾರಿ ಹೇಳುತ್ತಿದ್ದಾರೆ. ಹೀಗಿರುವಲ್ಲಿ ಕೆಲವು ಹುಲ್ಲೆಮರಿಗಳು ರಾಜಕೀಯ ತೋಳಗಳ ಆಟದ ಮರಿಗಳಾಗಿ ಎಷ್ಟು ದಿವಸ ಬಾಳೀತು? ತಿಳಿಯದು! ಹುಲ್ಲೆಮರಿಗಳಿಗೂ ತೋಳನ ಹಾಲು ರುಚಿಯೂ ಗುಣವಂತಹ ಸ್ಥಿತಿಯು ಬರಬಹುದು!

ಅಂತ್ಯದಲ್ಲಿ ನಮ್ಮ ಸಂಯೋಜನಾ ಮಿತ್ರರಲ್ಲಿ ಎರಡು ಕೋರಿಕೆ—

ಒಂದನೆಯದಾಗಿ—ಕೊಡಗಿನ ಸಂಯೋಜನಾ ಪ್ರಶ್ನೆಯನ್ನು ಈ ಚುನಾವಣೆಯಲ್ಲಿ ಬಚ್ಚಿಡುವುದು ನ್ಯಾಯವಲ್ಲ. ಈ ಪ್ರಶ್ನೆಯೊಂದು ತೀರ್ಮಾನವಾಗದೆ ದೇಶದಲ್ಲಿ ಯಾವ ಅಭಿವೃದ್ಧಿಗೂ ಎಡೆ ಇಲ್ಲವೆಂದು ಪ್ರತಿದಾರರೆಲ್ಲರೂ ಅರಿತಿರುವ ಈ ಸಮಯದಲ್ಲಿ ನೀವು ನಿಮ್ಮ ಮನಸಾಕ್ಷಿಯಾಗಿಯೂ ನಂಬಿರುವ ಸಂಯೋಜನೆಯ ತತ್ವವನ್ನು ಬಚ್ಚಿಡುವುದು ಯುಕ್ತವಲ್ಲ ಬದಲಾಗಿ ಎರಡು ಪಂಗಡಗಳೂ ಅವರವರ ಮೂಲ ತತ್ವವನ್ನು ಮತದಾರರಿಗೆ ಸಂಪೂರ್ಣವಾಗಿ ಮನದಟ್ಟು ಮಾಡಿ, ಅವರ ಅಭಿಪ್ರಾಯಕ್ಕೆ ತಲೆಬಾಗುವುದು ರಾಜಕೀಯ ಧರ್ಮವು.

ಎರಡನೆಯದು—ಕೊಡಗಿನ ಇಂದಿನ ಚುನಾವಣೆಯಲ್ಲಿ, ಕೇವಲ ಪ್ರಾಂತೀಕ ಪ್ರಶ್ನೆಯಾದ ಕೊಡಗಿನ ಭವಿಷ್ಯದ ಪ್ರಶ್ನೆಯೇ ಅಡಗಿರುವಾಗ, ಬರೇ ಬಯಲಿನಲ್ಲಿ ನಿಂತು ಕಾದಾಡುವ ಪ್ರತ್ಯೇಕವಾದಿಗಳ ಹೊಲೆ ಕಾದಾಡಲು ನೀವು ಆ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನಲ್ಲಿ ನಿಲ್ಲಬೇಡಿ. ಬಯಲಿನಲ್ಲಿ ನಿಂತವರೂ ಕೂಡ ಕಾಂಗ್ರೆಸ್ ಪ್ರೇಮಿಗಳೇ. ಪ್ರೌಢ ಮತದಾನದ ಪ್ರಥಮ ಪರೀಕ್ಷೆಯಲ್ಲಿ ಮತದಾರರು ಅವರ ಹಕ್ಕನ್ನು ಹೇಗೆ ಉಪಯೋಗಿಸುವರೆಂದು ಯಾರಿಗೂ ಹೇಳಲಸಾಧ್ಯ. ಬಹುಶಃ ಇನ್ನೆರಡು ತಿಂಗಳಲ್ಲಿ ಫಲಿತಾಂಶವು ತಿಳಿದು ಬರುವಾಗ, ನಿಮ್ಮ ಇಂದಿನ ವರ್ತನೆಯು, ಕಾಂಗ್ರೆಸ್ ನೆಲಲಿನಿಂದಲೇ ಕಾದಾಡುವ ಕಾರ್ಯಕ್ರಮದಿಂದು, ಕಾಂಗ್ರೆಸ್ಸಿನ ಹೆಸರುವಾಸಿಗೆ ಅಪಕೀರ್ತಿಯು ಬಂದರೆ, ನೀವು ಆ ಸಮಯದಲ್ಲಿ ನಿಮಗೆ ನೆಲಲನ್ನು ಕೊಟ್ಟ ಕಾಂಗ್ರೆಸ್ಸಿನ ಕೀರ್ತಿಯನ್ನು ಹೇಗೆ ಪಾಲಿಸುವಿರಿ?

Representation of the people (Conduct of Elections and Election Petitions) Rules.

೧೯೫೧ರ ಕಾಯಿದೆಯ ನಿಬಂಧನೆಗನುಸಾರವಾಗಿ ನೋಟೀಸು.

ಲೋಕಸಭೆಯ (House of the people) ಕೊಡಗು ದೇಶದ ಚುನಾವಣೆ ಸ್ಥಾನದಿಂದ 1952ನೆಯ ಇಸವಿ ಫೆಬ್ರವರಿ 5ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಒಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ ಮೇಲೆ ಸೂಚಿತವಾದ ಚುನಾವಣೆ ಸ್ಥಾನದ ರಿಟರ್ನಿಂಗ್ ಆಫೀಸರಾದ ಶ್ರೀ ಎನ್. ಸಿ. ಸುಬ್ಬಯ್ಯ ಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನರ ತಿಳಿವಳಿಕೆಗಾಗಿ ಈ ರೀತಿ ಪಬ್ಲಿಕ್ ನೋಟೀಸು ಕೊಟ್ಟಿದ್ದೇನೆ:—

ಪಬ್ಲಿಕ್ ನೋಟೀಸು.

(i) ಚುನಾಯಿಸಲ್ಪಡತಕ್ಕವರ ಸಂಖ್ಯೆಯು ಒಂದು:

(ii) "ನಾಮಿನೇಷನ್" ಕಾಗದಗಳನ್ನು ಈ ಕೆಳಗೆ ರುಜು ಮೊಡಿರತಕ್ಕವಂಗೆ ಮಡಿಕೇರಿಯಲ್ಲಿರುವ ಅವರ ಆಫೀಸಿನಲ್ಲಿ ಕೊಡಬಹುದು. ಅವುಗಳನ್ನು 1951ನೆಯ ಡಿಸೆಂಬರ್ 4ನೆಯ ತಾರೀಖಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಬೆಳಗ್ಗೆ 11 ಗಂಟೆಯಿಂದ ಅಪರಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು.

(iii) "ನಾಮಿನೇಷನ್" ಕಾಗದದ ನಮೂನೆಗಳನ್ನು ಮೇಲೆ ನಮೂದಾಗಿರತಕ್ಕವರ ಆಫೀಸುಗಳಲ್ಲಿ 26–11–1951 ತಾರೀಖಿನಿಂದ 3–12–1951 ತಾರೀಖಿನ ದಿನದ ವರೆಗೆ 11 ಘಂಟೆಯಿಂದ 5–30 ಘಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮಿನೇಷನ್" ಕಾಗದಗಳನ್ನು 1951 ಡಿಸೆಂಬರ್ 8ನೇ ತಾರೀಖಿನ ದಿನ ಪೂರ್ವಾಹ್ನ 11 ಗಂಟೆಗೆ ಮಡಿಕೇರಿ ಚೀಫ್ ಇಲೆಕ್ಟರಲ್ ಆಫೀಸರ ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದುವಾರರಿದ್ದು ಸ್ಪರ್ಧಿಸುವ ಪಕ್ಷದಲ್ಲಿ ಚುನಾವಣೆದಾರರು ಓಟು ಕೊಡುವ ತಾರೀಖು ಅಥವಾ ತಾರೀಖುಗಳನ್ನೂ ಮತ್ತು ಅವರು ಎಷ್ಟು ಘಂಟೆಯಿಂದ ಎಷ್ಟು ಘಂಟೆಯ ವರೆಗೆ ಓಟು ಕೊಡಬಹುದೆಂಬುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಖು 26–11–1951.
ಚೀಫ್ ಇಲೆಕ್ಟರಲ್ ಆಫೀಸರ್ ಮಡಿಕೇರಿ.

ಎನ್. ಸಿ. ಸುಬ್ಬಯ್ಯ.
ರಿಟರ್ನಿಂಗ್ ಆಫೀಸರ್.

ಕೊಡಗು

ತಾ. ೩೦-೧೧-೧೯೫೧ನೇ ಗುರುವಾರ

ಬತ್ತದ ಬೆಲೆ.

ಪ್ರತಿ ವರ್ಷ ಕೊಡಗಿನಲ್ಲಿ ಬತ್ತದ ಬೆಲೆಯನ್ನು ಸರಕಾಲದಲ್ಲಿ ನಿಶ್ಚಯಿಸದೆ ಬಡ ರೈತನಿಗೆ ತುಂಬಾ ತೊಂದರೆಯಾಗುತ್ತದೆ. ಈಗಾಗಲೇ ದೊಡ್ಡಿ, ಕೆಂಬಟ್ಟಿ ಮೊದಲಾದವುಗಳು ಕಣಜಿಲಿಗೆ ಬಂದಿದ್ದು ನಾಳೆ ನಾಡಿದ್ದು ಮಾರಾಟಕ್ಕೆ ಸಿದ್ಧವಾಗುತ್ತವೆ. ಆದರೂ ಬತ್ತದ ಬೆಲೆ ಇನ್ನೂ ನಿಶ್ಚಯವಾಗಲಿಲ್ಲ. ಈ ವರ್ಷ ಗಾಡಿಗೆ ಕಡಿಮೆ ರೂ. ೨೨೫-೦-೦ ದೊರೆಯಬೇಕೆಂಬುದು ಕೊಡಗಿನ ರೈತರಿಲ್ಲರ ಅಭಿಪ್ರಾಯವಾಗಿತ್ತು. ಈಗಿನ ಜೀವನ ಖರ್ಚಿನ ದೃಷ್ಟಿಯಿಂದ ಈ ಬೆಲೆಯು ಹೆಚ್ಚಲ್ಲವೆನ್ನಬಹುದು. ಆದರೆ ಕೇಂದ್ರ ಸರಕಾರವು ೧೨೦ ಪರೆಯ ಗಾಡಿಗೆ ರೂ. ೨೦೨ ಬೆಲೆ ನಿಶ್ಚಯಿಸಿದೆಯೆಂದು ವರ್ತಮಾನವಿದೆ. ಇದು ಬತ್ತ ಸಂಗ್ರಹ ಚಾರ್ಜು ರೂ. ೧೦ ನ್ನು ಸೇರಿಸದೆ ಎಂದು ತಿಳಿಯಬರುತ್ತದೆ. ಶೀಘ್ರ ಇದು ಜಾರಿಯಲ್ಲಿ ಬರುವಂತಾಗಬೇಕು.

ಕಳೆದ ವರ್ಷ ಬತ್ತದ ಬೆಲೆಯನ್ನು ಸರಿಯಾಗಿ ಒಂದೇ ಬಾರಿಗೆ ಗೊತ್ತುಮಾಡದೆ ಪ್ರಥಮದಲ್ಲಿ ಗಾಡಿಗೆ ರೂ. ೧೮೪ ರಲ್ಲಿ ಮಾರಾಟ ಮಾಡಲು ಬಿಟ್ಟು ನಂತರ ಒಂದು ಅವಧಿಯಲ್ಲಿ ಮಾರಿದವರಿಗೆ ಗಾಡಿಗೆ ರೂ. ೬ ಹೆಚ್ಚು ಕೊರೆಯುವುದೆಂದು ಪ್ರಕಟಿಸಿದರೂ ಯಾವ ರೈತನಿಗೂ ಇದರಿಂದ ಪ್ರಯೋಜನವಾಗಲಿಲ್ಲ.

ಬತ್ತದ ಬೆಲೆಯನ್ನು ಕೇಂದ್ರ ಸರಕಾರವು ನಿಶ್ಚಯಿಸುವಾದರೂ ಸ್ಥಳೀಯ ಸರಕಾರದ ಶಿಫಾರಸ್ಸಿನ ಮೇರೆ ಅದನ್ನು ನಿಶ್ಚಯಿಸಲ್ಪಡುತ್ತದೆ. ಸ್ಥಳೀಯ ಸರಕಾರವು ತನ್ನ ಶಿಫಾರಸ್ಸನ್ನು ಕಳುಹಿಸಿದ್ದು ಅದರ ಮೇಲೆ ಇಂಡಿಯಾ ಸರಕಾರವು ಈ ಬೆಲೆಯನ್ನು ನಿಶ್ಚಯಿಸಿದೆ. ಸ್ಥಳೀಯ ಸರಕಾರವು ಕೊಡಗಿನ ರೈತನ ಸ್ಥಿತಿಯನ್ನು ಪರಿಶೀಲಿಸಿ ತಿಳಿದು ಬೆಳೆಸುವವನಿಗೆ ಸ್ವಲ್ಪ ಪ್ರೋತ್ಸಾಹಕವಾದ ಬೆಲೆ ನಿಶ್ಚೈಸುವ ದೃಷ್ಟಿಯಿಂದ ಮಾಡಿದ ಸೂಚನೆಯನ್ನು ಪೂರ್ತಿಯಾಗಿ ಕೇಂದ್ರ ಸರಕಾರವು ಒಪ್ಪಿಲ್ಲವಾದರೂ ಗಾಡಿಗೆ ರೂ. ೨೦೨ ಕಂತೆ ನಿಶ್ಚಯಿಸಿದ್ದು ಸ್ವಲ್ಪ ಮಟ್ಟಿಗೆ ತೃಪ್ತಿಕರವಾಗಿದೆ. ಸರಕಾರವು ಶೀಘ್ರವಾಗಿ ಇದನ್ನು ಪ್ರಕಟಿಸಬೇಕು. ಇಲ್ಲವಿದ್ದರೆ ದುಡ್ಡಿನ ತೊಂದರೆಯಿಂದ ನರಳುತ್ತಿರುವ ರೈತನು ಬತ್ತ ಮಾರಾಟ ಮಾಡಲಾರದೆ ವಿಪರೀತ ಕಷ್ಟಕ್ಕೊಳಗಾಗ ಬೇಕಾಗುವದು.

ವರ್ತಮಾನ.

ಬೊಂಬಾಯಿ ಪ್ರಾಂತದ ಮಹಬಲೇಶ್ವರದ ಜೇನಿನ ಕಾರ್ಖಾನೆಯಲ್ಲಿ ಮೇನೇಜರಾಗಿದ್ದ ಶ್ರೀ ಪಿ. ಜಿ. ಮುದ್ದಯ್ಯನವರ ಅಳಿಯಂದಿಯರಾದ ಶ್ರೀ ಜಿ. ಎಂ. ಗಣೇಶರಾಮ್‌ರವರು ತಾ. ೨೧ರಲ್ಲಿ ಮೈಸೂರು ಆಸ್ಪತ್ರೆಯಲ್ಲಿ ಶಿವಾಧೀನರಾದರು.

ಹಾತೂರು ಹಾಕಿ ಕಪ್ ಪಂದ್ಯಾಟದಲ್ಲಿ ಜಯಶೀಲರಾದ "ಯಂಗ್‌ಸ್ಟರ್ಸ್ ಸ್ಪೋರ್ಟ್ಸ್ ಕ್ಲಬ್"ನ ಹೇಪು ಕಳೆದ ವಾರ ಮಡಿಕೇರಿ ಕಾಟೇಜ್ ಕಪ್ ಪಂದ್ಯಾಟದಲ್ಲಿಯೂ ಜಯಶೀಲವಾಗಿ ಕಪ್ಪನ್ನು ಗೆದ್ದಿತು.

ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಪ್ರಸನ್ನಕುಮಾರ ಎತ್ಲೆಟಿಕ್ ಸ್ಪರ್ಧೆಯಲ್ಲಿ ಶ್ರೀ ಕೋದಾಂಡ ಬೋಪಯ್ಯನವರು ಭಾರದ ಗುಂಡನ್ನು ಎಸೆಯುವುದರಲ್ಲಿ ಪ್ರಥಮ ಬಂದಿರುವದಲ್ಲದೆ ಬೆಂಗಳೂರಿನ ರಿಕಾರ್ಡನ್ನು 2½ ಅಡಿಗಳಿಂದ ಮುರಿದರು.

ಕೊಡಗು ಕೌನ್ಸಿಲಿನ ವಿಠಲೆಂಗೊಂದು ತಾ. ೧೦-೧೨-೫೧ರಲ್ಲಿ ಮಡಿಕೇರಿಯಲ್ಲಿ ನಡೆಯುವದು.

ಕೊಡಗಿನ ಮುಂಬರುವ ಶಾಸನ ಸಭಾ ಚುನಾವಣೆಗೂ ಕೇಂದ್ರ ಪಾರ್ಲಿಮೆಂಟಿಗೂ ಉಮೇದುವಾರರಾಗಲಿರುವವರು ನಾಮಪತ್ರವನ್ನು ಸಲ್ಲಿಸುವ ಕಡೇ ತಾರೀಕು ಡಿಸೆಂಬರು ೪ ಎಂದೂ ಪರಿಶೀಲನೆ ತಾ. ೫ರಲ್ಲಿ ಎಂದೂ, ವಾಪಾಸು ತೆಗೆದು ಕೊಳ್ಳಲು ಕಡೇ ತಾ. ಡಿಸೆಂಬರು ೧೧ ಎಂದೂ, ಮತದಾನವು ಜನವರಿ ತಾ. ೧೪ ರಿಂದ ಪ್ರಾರಂಭವಾಗುವುದೆಂದೂ ಪ್ರಕಟವಾಗಿದೆ.

ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಇಂಟರ್‌ಡಿವಿಜಿಯೇಟ್ ಪರೀಕ್ಷೆಯಲ್ಲಿ ಶ್ರೀಗಳಾದ ಕೇತಿಯಂಡ ಸಿ. ತಿಮ್ಮಯ್ಯ, ಖಲೀಲ್ ಖಾನ್ ಕೈಸ್ತ ಮತ್ತು ಪುಲಿಯಂಡ ಜೆ. ಸೀತಮ್ಮಾರ್ ಇವರುಗಳೂ, ಬಿ. ಯಸ್. ಸಿ. ಪರೀಕ್ಷೆಯಲ್ಲಿ ಶ್ರೀಮತಿಗಳಾದ ಪುಟ್ಟಿಚಂಡ ಯಂ. ಗಂಗಮ್ಮ ಮತ್ತು ಕೊಕ್ಕಲೆರ ಯಸ್. ಪಾರ್ವತಿಯವರು ಪೂರ್ತಿಯಾಗಿ ಪಾಸಾಗಿರುವರು.

ಹುದಿಕೇರಿ ಶಾಲಾ ಆಶ್ರಯದಲ್ಲಿ ಶ್ರೀ ಕಾಡ್ಯಾಮಾಡ ಐಯ್ಯನ್ನ ಸಹೋದರರು ಇಟ್ಟ ಹಾಕಿ ಕಪ್ಪಿನ ಪಂದ್ಯಾಟವು ಡಿಸೆಂಬರ್ ೩ ರಿಂದ ಪ್ರಾರಂಭವಾಗುವದು.

ಶ್ರೀಮಂಗಲ ನಾಡು ಹರಿಹರ ಸುಬ್ರಮಣ್ಯ ದೇವಸ್ಥಾನದ ಬಳಿ ದಸರಗಳ ಮತ್ತು ವಸ್ತು ಪ್ರದರ್ಶನವು ಬರುವ ತಾ. ೪ ಮತ್ತು ೫ ರಲ್ಲಿ ನಡೆಯುವದು.

ಬೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನ ಎತ್ಲೆಟಿಕ್ ಛಾಂಪಿಯನ್‌ಶಿಪ್ ಕಪ್ಪನ್ನು ಶ್ರೀ ಎಂ ಬಿ ತಿಮ್ಮಯ್ಯನವರು ಪಡೆದಿರುವರು. ಶ್ರೀ ಎಂ. ಎಂ. ಮೂಚಯ್ಯನವರು ಫಿಲೋಮಿನ ಕಾಲೇಜಯೂನಿಯನಿನ ಗೌರವ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿರುವರು.

ವೀರಾಜಪೇಟೆಯಿಂದ ಕುಟ್ಟಕ್ಕೆ 1½ ಗಂಟೆಗೆ ಹೋಗುವ ಸಿ. ಜಿ. ಎ. ೪೫ಳನ್ನೇ ಹಿ. ವಿ. ಬಸ್ಸಿನಲ್ಲಿ ತಾ. ೨೪ನೇ ಶನಿವಾರ ಯಾರದೋ ರೂ. ೨೦ ಬಿದ್ದು ಸಿಕ್ಕಿ ಅದು ಕಂಡಕ್ಟರ್ ಶ್ರೀ ಕೂತಂಡ ಎನ್. ಮಂದಪ್ಪನವರಲ್ಲಿ ಹೆಯೆಂದೂ ಕಳಕೊಂಡವರು ತಕ್ಕ ರುಜುವಾತಿನಿಂದ ಅದನ್ನು ಹೊಂದಿಕೊಳ್ಳಬಹುದೆಂದೂ ತಿಳಿಸುತ್ತಾರೆ.

ಬಿ. ಎ. ಮತ್ತು ಬಿ. ಎಸ್. ಪಾಸಾದ ಕೊಡಗಿನ ಶರಣರು ಹೈಸ್ಕೂಲು ಉಪಾಧ್ಯಾಯರ ವೃತ್ತಿಗಾಗಿ ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳ ತಕ್ಕದ್ದು.

ಕೊಡಗು ಪೋಲೀಸಿಗೆ ಜನರು ಬೇಕಾಗಿದ್ದಾರೆ. ಸೇರಲು ಇಷ್ಟವುಳ್ಳವರು ಡಿಸೆಂಬರ್ ೫ನೇ ತಾರೀಕಿನೊಳಗೆ ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿಗೆ ಹಾಜರಾಗಬೇಕಾಗಿ ಈ ಮೂಲಕ ತಿಳಿಸಿದೆ. ಮೊ ಜಿ ಸಿಪಾಯಿ, ಮಾಜಿ ಎಸ್. ಸಿ. ಸಿವಿಲ್ ಗಾರ್ಡ್ಸ್ ಇವರುಗಳಿಗೆ ಹೆಚ್ಚಿನ 'ಪ್ರಿಫರೆನ್ಸ್' ಕೊಡಲಾಗುವುದು.

ಕೆಲವು ದಿವಸಗಳಿಗೆ ಹಿಂದೆ ಮಡಿಕೇರಿ ಸುಂಟಿಕೊಪ್ಪ ರಸ್ತೆ ತಿದಕಲ್‌ನಲ್ಲಿ ಮೂಪಿಲ್ಲೆ ಪುತ್ತು ಬ್ಯಾರಿ ಎಂಬವನು ಆಪನ ಹೆಂಡತಿಯನ್ನು ಕೊಂದನೆಂಬ ಕೇಸು ಮಂಡಿಕೇರಿ ಸೆಷನ್ಸ್ ಕೋರ್ಟಿನಲ್ಲಿ ವಿಚಾರವಾಗಿ ತಾ. ೧೭-೧೧-೫೧ ರಲ್ಲಿ ಆಪರಾಧಿಗೆ ಪಾಸಿ ಶಿಕ್ಷೆ ತೀರ್ಪು ಕೊಡಲಾಯಿತು.

೨೨-೧೧-೫೧ ರಲ್ಲಿ ಮಡಿಕೇರಿ ನಾಡು ಆರುವತೊಕ್ಕು ಗ್ರಾಮದ ಮುಂಜಾಂದಿರ ಗಣಪತಿಯವರನ್ನು ಅವರ ಮನೆ ಕಾರ್ಯಪ್ಪನವರು ಗುಂಡು ಹೊಡೆದು ಕೊಂದರೆಂಬ ಕೇಸು ಬಗ್ಗೆ ಪೋಲೀಸು ವಿಚಾರ ನಡೆಯುತ್ತಿದೆ. ಗಣಪತಿಯವರ ಜೊತೆಯಲ್ಲಿದ್ದ ಚಾತಪನ ಪೂನಯ್ಯನವರಿಗೆ ಗುಂಡು ತಗಲಿ ಸತ್ತಿರುವರೆಂಬ ವರ್ತಮಾನ.

ಶ್ರೀ ಬಿ. ಯಸ್. ಕುಶಾಲಪ್ಪನವರು ಮಡಿಕೇರಿ ಸರಕಾರಿ ಕಾಲೇಜಿನ ಪ್ರಿನ್ಸ್‌ಪಾಲರ ಕೆಲಸಕ್ಕೆ ೧-೧೨-೫೧ ರಿಂದ ರಾಜಿನಾಮೆ ಕೊಡಲಿರುವರು. ಇವರು ಕಾಂಗ್ರೆಸು ಪರ ಉಮೇದುವಾರರಾಗಿ ಕೊಡಗು ಎಸೆಂಬ್ಲಿ ಚುನಾವಣೆಗೆ ನಿಲ್ಲುವರೆಂ

ಸೇಲಂ ನಗರಸಭೆಯ ೧೨ ಜನ ಕಾಂಗ್ರೆಸಿಗರ ರಾಜಿನಾಮೆ

ಸೇಲಂ ನಗರ ಸಭೆಯ ೧೨ ಜನ ಕಾಂಗ್ರೆಸ್ ಸಭಾಸದರು ಕಾಂಗ್ರೆಸ್ಸಿನ ಪ್ರಾಥಮಿಕ ಸದಸ್ಯತ್ವ ಹಾಗೂ ಮಹತ್ವದ ಸ್ಥಾನಗಳಿಗೆ ರಾಜಿನಾಮೆಯಿತ್ತಿದ್ದಾರೆ. ಅವರಲ್ಲಿ ನಗರ ಸಭೆಯ ಅಧ್ಯಕ್ಷರೂ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳೂ ಇದ್ದಾರೆ. ಗಾಂಧಿ ತತ್ವಾನುಯಾಯಿಗಳಿಗೆ ಕಾಂಗ್ರೆಸಿನಲ್ಲಿ ಸ್ಥಾನವು ಉಳಿದಿಲ್ಲವೆಂದು ಇವರು ತಮ್ಮ ರಾಜಿನಾಮೆ ಪತ್ರಗಳಲ್ಲಿ ಕಾರಣಿಸಿದ್ದಾರೆ.

ಶೇಕ್ ಅಬ್ದುಲ್ಲಾರ ಅಪಹರಣದ ಯತ್ನ

ಕಾಶ್ಮೀರದ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾರವರನ್ನು ಪಾಕಿಸ್ತಾನಕ್ಕೆ ಹಾರಿಸಿಕೊಂಡು ಹೋಗುವ ಕಾರಸ್ಥಾನವೊಂದು ನಡೆದಿದ್ದು ವೈಮಾನಿಕನ ಆಜಾತುಯಿಂದ ಕೊನೆಯ ತಕ್ಷಣದಲ್ಲಿ ತಿಳಿಯಲ್ಪಟ್ಟಿತು.

ಡಿಲ್ಲಿಗೆಂದು ಹೊರಟ ವಿಮಾನವನ್ನು ನೇರಾಗಿ ಲಾಹೋರಿಗೆ ಒಯ್ಯುವದೆಂದು ಪೀಠಿಕೆ ನಡೆದಿತ್ತು. ವೈಮಾನಿಕನಿಗೆ ಒಂದು ಲಕ್ಷ ರೂಪಾಯಿ ಕಾಣಿಕೆ ಕೊಡುವ ಭರವಸೆಯಿತ್ತಂತೆ. ಅವನು ಆಪ್ತರಲ್ಲಿ ಆ ಸುದ್ದಿಯನ್ನು ಮೊದಲಾಗಿ ತಿಳಿಸಿದ್ದರಿಂದ ಕೊನೆಯ ಕ್ಷಣದಲ್ಲಿ ಅದು ಹೊಳಕಿಗೆ ಬಂತು. ಈ ಒಳಸಂಚಿನಲ್ಲಿ ಉನ್ನತಾಧಿಕಾರಿಗಳ ಕೈಯಿಯೆಂದು ಹೇಳಲಾಗಿದೆ. ಕಾಶ್ಮೀರೀ ಗುಪ್ತ ಪೋಲೀಸರು ತಪಾಸಣೆ ನಡೆಸುತ್ತಿರುವರು.

ಬೇಕಾಗಿದೆ.

ಗರಿಗಳು:-ಕಾಡುಕೋಳಿಯ ಕರುತ್ತಿಗೆಯಲ್ಲಿರುವ ಗರಿಗಳು ಪ್ರತಿಯೊಂದಕ್ಕೆ ರೂ. ೧-೮-೦ಯ ದರದಲ್ಲಿ, ನೀರುಬಾತಿನ ಗರಿಗಳು ಪೌಂಡಿಗೆ ೪ ಆಣೆಯ ದರದಲ್ಲಿ ಬೇಕಾಗಿವೆ.

D. H. THANGAM & Co.,
43, P. V. Koil Street,
Royapuram, Madras.
2-1

For Sale.

New 1951 Model unregistered Chevrolet Deluxe Car available directly from Show Room at Company's price. Delivery will be given in Coorg.

For particulars, write to

P. N. APPANA,
220-Walkeshwar Road,
Malabar Hill, Bombay.

ತಡೆ ನೋಟೀಸು.

ಬಿಳೂರು ಗ್ರಾಮದ ಇಬ್ರಾಹಿಂ ಯೂಸೆ ಬಾಷಾನಾದ ನಾನು ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ.

ನನ್ನ ಅಂಣನ ಮಗ ಅಮೀರ್ ಸಾಬಿಯು ನಮ್ಮ ಕುಟುಂಬಕ್ಕೆ ಸೇರಿದ ಸಾಗುಭೂಮಿಯನ್ನು ಪರಾಬಾರೆ ಮಾಡಲು ಯತ್ನಿಸುತ್ತಿದ್ದಾನೆ. ಈ ಸೊತ್ತುವಿನ ಹೇಲೆ ನನ್ನ ಹಕ್ಕು ಇರುವದರಿಂದಲೂ, ಆ ಸೊತ್ತನ್ನು ಪರಾಬಾರೆ ಮಾಡುವ ಅವಶ್ಯಕತೆ ಇಲ್ಲದುದರಿಂದಲೂ ಯಾರೂ ಇವನನ್ನು ಕ್ರಯಕ್ಕಾಗಲೀ ಬೋಗ್ಯಕ್ಕಾಗಲೀ ಪಡೆಯಕೂಡದು. ಹಾಗೆ ಪಡೆದರೆ ಅವರೇ ಮುಂಬರುವ ಕಷ್ಟನಷ್ಟಗಳಿಗೆ ಜವಾಬ್ದಾರರಾಗಿರಬೇಕೆಂದು ಈ ಮೂಲಕ ಎಚ್ಚರಿಸಿದೆ.

ಬಾಶಾ
ಬಿಳೂರು ಗ್ರಾಮ,
ಪೊನ್ನಂಪೇಟೆ.

ಕ್ರಯಕ್ಕೆ ದೊರೆಯುತ್ತೆ !
(ಬಹಳ ಅಚ್ಚುಕಟ್ಟಾದ ಮನೆ)

ಮಡಿಕೇರಿಯಲ್ಲಿ, ಬ್ರಾಹ್ಮಣರ ಬೀದಿಯ ರಸ್ತೆ ಬಾಜಿನಲ್ಲಿ ಎತ್ತರವಾದ ಪ್ರದೇಶದಲ್ಲಿ ಒಳ್ಳೇ ಗಾಳಿ ಬೆಳಕಿಗೆ ಅನುಕೂಲವಾಗಿರುವ ಮತ್ತು ಶುದ್ಧವಾದ ನೀರು ಉಳ್ಳ ಸೇದುಬಾವಿಯನ್ನೊಳಗೊಂಡಿರುವ ಮಂಗಳೂರು ಹಂಚಿನ ದೊಡ್ಡ ಮನೆ ಮಾರಾಟಕ್ಕಿದೆ. ಕ್ರಯ ರೂಪಾಯಿ 16,000/—

ಹೆಚ್ಚು ವಿಷಯಗಳಿಗೆ ಈ ಕೆಳಗೆ ಕಂಡವರಲ್ಲಿ ವಿಚಾರಿಸಿ, ಆಥವಾ ಬರೆಯಿರಿ.

ಹೆಚ್. ವಿ. ರಾಮಕೃಷ್ಣ,
ಬ್ರಾಹ್ಮಣರ ಬೀದಿ,
4-3 ಮಡಿಕೇರಿ.

ಓದುಗರ ಓಲೆಗಳು

'ತನ್ನ ಹಿತಕ್ಕಾಗಿ ಪರನಿಂದೆ'

ಇದೇ ತಾರೀಕು ೧೬ ರ 'ಕೊಡಗು' ಪತ್ರಿಕೆಯಲ್ಲಿ 'ದೇವರು ಕೊಟ್ಟರೂ ಪೂಜಾರಿ ಬಿಡ' ಎಂಬ ಓಲೆಯನ್ನು ಓದಿ, ಜೆ ನ್ನಾಗಿ ಮನನವರಿತುಕೊಂಡೆನು. ಆದರೆ ಈ ವಿಷಯದಲ್ಲಿ ಸತ್ಯಾಂಶವಿಲ್ಲವೆಂದು ಹೇಳಬಯಸುತ್ತೇನೆ. ಕಾನೂರು ಆಸ್ಪತ್ರೆಯ ನಾನೊಬ್ಬ ರೋಗಿ. ಪದರಿ ಆಸ್ಪತ್ರೆಗೆ ವಾರಕ್ಕೆ ಎರಡಾವರ್ತಿ ಬಾಳೆಲೆಯಿಂದ ಬರುವ ಡಾಕ್ಟರ್ ಮುತ್ತಣ್ಣನವರು, ತಾವು ಬರುವ ದಾರಿಯಲ್ಲಿ ಇರುವ ರೋಗಿಗಳನ್ನೂ ಆಸ್ಪತ್ರೆಯಲ್ಲಿ ಇರುವ ರೋಗಿಗಳನ್ನು ಸಾಯಂಕಾಲವಾದರೂ ಸಹ ನೋಡಿಕೊಂಡು ತಮ್ಮ ಸೇವೆಯನ್ನು ಸಲ್ಲಿಸಿ, ಸಾಧ್ಯ ಇಲ್ಲದ ರೋಗಕ್ಕೆ ಬೇರೆ ಕಡೆ ದೊಡ್ಡ ಆಸ್ಪತ್ರೆಗಳಿಗೆ ಹೋಗುವಂತೆ ಸಲಹೆ ಕೊಟ್ಟು ಕಳುಹಿಸುತ್ತಾ ಇದ್ದಾರೆ. ಆದರೆ ಅವರು ಬೇಗಿನಲ್ಲಾ ಯಾ ಜೇಬಿನಲ್ಲಾ ಔಷಧಿ ಬಾಳೆಲೆಯಿಂದ ತಂದೂ ಕಾನೂರಲ್ಲಿ ರೋಗಗಳಿಗೆ ಮೂರುವರೆಂಬುದು 'ಕುಡಿಯುವ ನೀರಿಗೆ ಕೈಹಾಕಿಕೊಂಡು ತಾನು ಕುಡಿಯುವದು ಇಲ್ಲ ಕುಡಿಯುವವನಿಗೆ ಕೊಡುವದು ಇಲ್ಲ' ಎಂಬಂತೆ ಆಗಿದೆ. ತನ್ನ ಕಾಯಿಲೆ ವಾಸಿಯಾಗದಕ್ಕೆ ಬೇರೆಯವರಿಗೆ ಔಷಧವೇ ಮಾಡಬೇಡವೆಂಬಷ್ಟೂ ಇನ್ನು ಈ ಆಸ್ಪತ್ರೆಗೆ ಡಾಕ್ಟರ್‌ಗಳೇ ಬರಬಾರದೆಂತಲೂ ಆವರ ಅಭಿಪ್ರಾಯವಿರುವದೇ? ಒಂದು ಗಂಜಿ ಕ್ಷೀರಕ್ಕೆ ಒಂದು ಹನಿ ವಿಷ ಬಿದ್ದರೆ ಪೂರ್ತಿ ಕ್ಷೀರವೇ ವಿಷವಾದಂತೆ, ಇಂಥಾ ಒಂದೊಂದು ವ್ಯಕ್ತಿಗಳಿಂದ ನಮ್ಮ ಗ್ರಾಮಕ್ಕೆ ಅಲ್ಲ, ನಾಡಿಗೆ ಅಲ್ಲ, ಇಡೀದೇಶಕ್ಕೆ ಹಾನಿಯಾಗುತ್ತಿದೆ. ಕಾನೂರು ಆಸ್ಪತ್ರೆಗೆ ಧಮರ್ಾರ್ಥವಾಗಿ ಹೂವಿನ ಚಟ್ಟ ಕೊಟ್ಟ ದಿನವೇ ಅವರು ಹೇಳಿರುತ್ತಾರೆ–ಇಲ್ಲಿ ನಿತ್ಯ ಆಸ್ಪತ್ರೆ ತೆರೆಯುವದಿಲ್ಲ ನಿತ್ಯ ಹೂವಿಗೆ ನೀರು ಹಾಕುವ ತಾಪತ್ರೆ ಆದರಿಂದ ಬಾಳೆಲೆ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತೇನೆಂದು..... ಸಾರ್ವಜನಿಕರ ರೂಪುರೂಪು ಕೊಂಡು ಹೋಗಿರುವದರಿಂದ ಆರೋಪಕ್ಕೆ ಎಲ್ಲಿಯೂ ಎಡೆ ಇಲ್ಲ.

'ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದ ರೋಗಿ.'

ಕೊಡಗಿನ ಭವಿಷ್ಯ ಜನರ ಕೈಯ್ಯಲ್ಲಿದೆ.

ನಿಜವಾಗಿಯೂ ಕೊಡಗಿನ ಭವಿಷ್ಯದ ವಿಚಾರವಾಗಿ ನಿರ್ಣಯ ಕೊಡುವ ಹಕ್ಕು ಕೊಡಗಿನ ಸಮಸ್ತ ಜನತೆಯದಲ್ಲದೆ ಮುಂದಾಳುಗಳೆಂದು ಓಡಾಡುವ ಕಾಂಗ್ರೆಸಿಗರದಲ್ಲ. ಕೊಡಗಿನ ಪ್ರತ್ಯೇಕ ಪಕ್ಷವು ಹಿಂದಿನಿಂದಲೂ ಕೂಡ ಕೊಡಗಿನ ಭವಿಷ್ಯದ ಬಗ್ಗೆ ಜನರ ಅಭಿಪ್ರಾಯ ತೆಗೆಯಬೇಕೆಂದು ವಾದಿಸುತ್ತಿದೆ. ಅದಕ್ಕಾಗಿ ವಿಶ್ವಪ್ರಯತ್ನ ಪಟ್ಟಿದೆ. ಇಂಥಾ ಕೂಡ ಅವರು ಈ ಪ್ರಶ್ನೆಯನ್ನು ಜನರ ಮುಂದೆ ಈ ಚುನಾವಣೆಯಲ್ಲಿ ಇಡಬೇಕೆಂದು ವಾದಿಸುತ್ತಿದ್ದಾರೆ. ಅವರ ಈ ಪ್ರಯತ್ನಕ್ಕೆ ದೇವರು ಅವರಿಗೆ ಚಿರಋಣಿಯಾಗಿದೆ ಕೊಡಗಿನ ಜನತೆಯನ್ನು ಕೇಳದೆ ಕೊಡಗನ್ನು ಬೇರೆ ಪ್ರಾಂತಕ್ಕೆ ವಿಲೀನಗೊಳಿಸಬೇಕೆಂದು ಈಗ ಕಾಂಗ್ರೆಸು ಎಂದು ಹೇಳುವ ಹಲವರು ಪ್ರಯತ್ನಿಸಿದರು. ಕೊಡಗಿನ ಜನರು ಇಂದು ಚುನಾವಣೆ ಹೊಂದಿರುವ ಪ್ರತಿನಿಧಿಗಳೇ. ಮುಂದೆ ಕೊಡಗಿನ ಭವಿಷ್ಯವನ್ನು ನಿರ್ಣಯಿಸುವರಾದ್ದರಿಂದ ಅವರನ್ನು ಆರಿಸುವಾಗ ಭವಿಷ್ಯದ ಬಗ್ಗೆ ಅವರ ಅಭಿಪ್ರಾಯವೇನೆಂದು ತಿಳಿದೇ ಮತದಾರನು ತನ್ನ ಓಟು ಕೊಡಬೇಕಲ್ಲದೆ ಸಂಯೋಜನವಾದಿಗಳು ಇಂದು ತಳೆದಿರುವ ವೇಷಕ್ಕೂ ಅವರ ರಸಭರಿತವಾದಭಾಷಣಕ್ಕೂ, ಮರುಳಾಗಿ ಅವರಿಗೆ ಮತವಿತ್ತರೆ ಕೊಡಗಿಗೆ ಉಳಿಗಾಲವಿಲ್ಲ. ಕಳೆದ ಸತ್ಯಾಗ್ರಹ ಸಮಯದಲ್ಲಿ ಈಸಂಯೋಜನವಾದಿ ಕಾಂಗ್ರೆಸ್ಸಿಗರು ದೇಶದ ಜನರಿಗೆ ಕೊಟ್ಟ ಬೋಧನೆಗಳು ಹೇಗೆ? ನಮ್ಮ ದೇಶವನ್ನು ನಾವೇ ಆಳುವ. ನಮ್ಮ ಕಾಲಲ್ಲಿ ನಾವು ನಿಲ್ಲುವ, ಪರರ ಕಾಲಡಿಯಲ್ಲಿ ನಿಲ್ಲುವದು ನಮಗೆ ಯೋಗ್ಯವಲ್ಲ. ನಾವು ವೀರರಿದ್ದೇವೆ, ಧೀರರಿದ್ದೇವೆ. ಎಂದು ಹೇಳಿದರು ಇಂದು ದೇಶವನ್ನು ಸಂಯೋಜನೆ ಮಾಡುವಾ ಎನ್ನುತ್ತಿದ್ದಾರೆ. ಅದೂ ಸಾಲದೆ ನಿನ್ನೆಯ ವರೆಗೆ ಕೊಡಗು ಸಂಯೋಜನೆಯೂಗಬೇಕೆಂದು ಪ್ರಯತ್ನಿಸುತ್ತಿದ್ದಂತ ಜನರು ಇಂದು ತಾವೂ ಪ್ರತ್ಯೇಕವಾದಿಗಳೆಂದೂ ಈ ಚುನಾವಣೆಯಲ್ಲಿ ಕೊಡಗಿನ ಭವಿಷ್ಯದ ಪ್ರಶ್ನೆ ಬರುವದಿಲ್ಲವೆಂದೂ ವಾದಿಸುತ್ತಿದ್ದರೆ ಅದು ಕೇವಲ ಅಧಿಕಾರಕ್ಕೆ ಏರುವ ಆಸೆಯಿಂದ ಎಂದು ಹೇಳಿದರೆ ತಪ್ಪಲ್ಲ. ಆದ್ದರಿಂದ ಮತದಾರರು ತುಂಬಾ ಎಚ್ಚರಿಕೆಯಿಂದ ವರ್ತಿಸಬೇಕು. ಕೊಡಗನ್ನು ಪ್ರತ್ಯೇಕ ವಿರಿಸಿ, ಆ ಕಾವೇರಿಮಾತೆಯ ಕೀರ್ತಿಯನ್ನು ಉಳಿಸಲಿಕ್ಕೆ ಪ್ರಯತ್ನಿಸುವ, ದೇಶದ ಪ್ರತ್ಯೇಕವಾದಿಗಳಿಗೆ ನಮ್ಮ ಮತದಾನವನ್ನು ಕೊಡುವ. ಬಿ. ಡಿ. ಅಚ್ಚಪ್ಪ.

ಓಟರರಿಗೆ ಎಚ್ಚರಿಕೆ

ಕೊಡಗು ಪವಿತ್ರ ಕಾವೇರಿಯ ದೇಶ ಈ ದೇಶದಲ್ಲಿ ಪ್ರತ್ಯೇಕವಾದ ಸಂಸ್ಕೃತಿ ನೀತಿಗಳಿವೆ. ಒಂದು ನೀತಿಯ ಧರ್ಮವು ಪ್ರತಿಮನೆಯಲ್ಲಿದೆ. ಇಂಥಾ ದೇಶವನ್ನು ಬೇರೆ ಪ್ರಾಂತದೊಡನೆ ಸೇರಿಸುವ ಮಾತು ಖಂಡಿತವಾಗಿಯೂ ಕಾವೇರಿ ಮಾತೆಗೆ ದ್ರೋಹ ಬಗೆದಂತೆ. ಆದ್ದರಿಂದ ಓಟರರು ನಿರ್ದಾಕ್ಷಿಣ್ಯವಾಗಿ ಪ್ರತ್ಯೇಕವಾದಿಗಳಿಗೆ ಓಟು ಕೊಡಬೇಕು. ಸಂಯೋಜನಾ ಪಕ್ಷದವರಿಗೆ ಕೊಡುವ ಪ್ರತಿ ಓಟೂ ಕೂಡ ದೇಶಕ್ಕೆ ಅಹಿತವನ್ನು ತರುವದಲ್ಲದೆ ಕಾವೇರಿ ಮಾತೆಯ ಪವಿತ್ರತೆಯನ್ನು ಹಾಳು ಮಾಡುವದು. ಆದ್ದರಿಂದ ಪ್ರತಿ ಓಟರೂ ಕೊಡಗನ್ನು ಉಳಿಸುವ ವಿಚಾರಕ್ಕೆ ತನ್ನ ಓಟನ್ನು ವಿನಿಯೋಗಿಸಲಿ.

ಎಸ್. ಕೆ. ಮಂಡುವಮ್ಮಯ್ಯ

ಶ್ರೀ ರಾಮಕೃಷ್ಣ ಆಶ್ರಮ ಪೊನ್ನಂಪೇಟೆ

ಶ್ರೀ ರಾಮಕೃಷ್ಣ ಧರ್ಮದಾಯಕ ಆಸ್ಪತ್ರೆಯೊಂದು ಇರುವುದು ಈನಾಡಿನ ಜನರ ಒಂದು ಭಾಗ್ಯವೇ ಸರಿ. ಅದರ ಅದರಲ್ಲಿ ಸರಿಯಾದ ಪ್ರತಿ ಫಲವನ್ನು ಹೆಚ್ಚಿನ ಜನರು ಹೊಂದಲಾಕರಿಂಬುದನ್ನು ಈಗ ತಾನೇ ನಾನು ತಿಳಿದೆನು. ಕಾರಣವಾದರೂ ಇಷ್ಟೇ ಹೆಚ್ಚಿನ ಪದವೀಧರರನ್ನು ಒಬ್ಬ ಡಾಕ್ಟರನ್ನಾನೇವಿ ಸಿದ್ದಂತೋಷ ಆದರೆ ಈ ಡಾಕ್ಟರವರು ಉದಾರತ್ವದಿಂದ ವೇತನವಿಲ್ಲದೆ ಕೆಲಸ ನಡೆಯಿಸುವುದಿಲ್ಲವಷ್ಟೆ! ಅಂದ ಮೇಲೆ ಇಷ್ಟೇ ಪದವೀಧರರಾದ ಇತರ ಡಾಕ್ಟರವರು ಈಗ ಕೊಡುತ್ತಿರುವ ವೇತನದಲ್ಲೇ ಕೆಲಸ ನಡೆಯಲು ಬರುವುದಿಲ್ಲವೇ? ಬಂಗಾಳಿ ಮತ್ತು ಇಂಗ್ಲಿಷ್ ಭಾಷೆ ಕಲಿತು ಈ ನಾಡಿನ ಹೆಚ್ಚಿನ ಜನರ ಕನ್ನಡವನ್ನು ಕೊಡಗು ಭಾಷೆ ಕಲಿಯದಿರುವ ಈ ಡಾಕ್ಟರವರಿಂದ ಹೆಚ್ಚು ಪ್ರಯೋಜನವಿಲ್ಲ. ಇದು ವ್ಯಕ್ತಿ ವಿದ್ವೇಷದಿಂದ ಬರೆದುದಲ್ಲ. ಬದಲು ರೋಗಿಯು ಕಾಯಿಲೆಯನ್ನು ಪೂರ ಹಿಡಿದು ಕೊಂಡೇ ಕೂತಿರುವ ಕಾಲದಲ್ಲಿ ಡಾಕ್ಟರು ಅವರ ಭಾಷೆಯನ್ನು ಇಂಗ್ಲಿಷಿನಲ್ಲಿ ತರ್ಜಿಮೆ ಮಾಡಿ ಡಾಕ್ಟರವರಿಗೆ ಹೇಳಿ ಡಾಕ್ಟರವರು ಪೇಶೆಂಟ್ ಮಾಡುವಾಗ ಏನೊಂದು ಹೇಳಲರಿಯದ ಆ ರೋಗಿಯ ಸ್ಥಿತಿ ಅರಿವಾಗುವದು ಕಷ್ಟವಲ್ಲವೇ? ಬದಲು ಇಲ್ಲಿಯ ಭಾಷೆ ಅರಿತ ಒಬ್ಬರನ್ನು ಇಟ್ಟು ಕೊಂಡಿದ್ದೇ ಆದರೆ ಹಿತವಲ್ಲವೇ? 'P. S. D.'

ಇದಾವ ಸೇವೆ?

ಸೋಮವಾರಪೇಟೆ ನೋಟಿಫೈಡ್ ಏರಿಯಾದ ಮೆಂಬರುಗಳಲ್ಲಿ ಒಬ್ಬರು ಚುನಾವಣೆಗೆ ನಿಂತಾಗ ತಾನು ಜನರ ಉದ್ಧಾರಕ್ಕಾಗಿ ನಿಂತಿಹ್ದೇನೆ. ಬಡಜನರ ಸೇವೆಯೇ ನನ್ನ ಗುರಿ ಎಂದು ಹೇಳಿ ತ್ತಾ ಓಟನ್ನು ಪಡೆದು ಸದಸ್ಯರಾಗಿ ಆರಿಸಲ್ಪಟ್ಟರು. ಈಗ ಅವರೇ ಸದಸ್ಯತನಕ್ಕೆ ರಾಜೀನಾಮೆ ಇತ್ತು ಅದೇ ಆಫೀನಿನ ಗುಮಾಸ್ತರಾಗುವರೆಂಬ ವರ್ತಮಾನ ವಿದೆ. ಇದಾವ ಸೇವೆ? 'ಪಟಣಿಗ'

Representaion of the people (Conduct of Elections and Election Petitions) Rules-

೧೯೫೧ರ ಸಿನೆಯ ನಿಬಂಧನೆಗನುಸಾರವಾಗಿ ನೋಟೀಸು.

ಕೊಡಗು ವಿಧಾನ-ಸಭೆಯ (Coorg Legislative Assembly ಉತ್ತರಕೊಡಗು ತಾಲೋಕಿನ ಎಂಟು ಚುನಾವಣೆ ಸ್ಥಾನಗಳಿಂದ 1952ನೆಯ ಇಸವಿ ಫೆಬ್ರವರಿ 5 ನೆಯ ತಾರೀಕಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಹತ್ತು ಮಂದಿ ಸದಸ್ಯರುಗಳನ್ನು ಚುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ, ಮೇಲೆ ಸೂಚಿತವಾದ ಚುನಾವಣೆ ಸ್ಥಾನದ ರಿಟರ್ನಿಂಗ್ ಅಧೀಸರಾದ ಶ್ರೀ ಜಿ. ಸಿ. ಕಾರ್ಯಪ್ಪಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನರ ತಿಳುವಳಿಕೆಗಾಗಿ ಈ ಕೆಳಗಿನ ಪಬ್ಲಿಕ್ ನೋಟೀಸ್ ಕೊಟ್ಟಿದ್ದೇನೆ:-

ಪಬ್ಲಿಕ್ ನೋಟೀಸು.

(i) ಚುನಾಯಿಸಲ್ಪಡತಕ್ಕವರ ಸಂಖ್ಯೆಯು ಉತ್ತರ ಕೊಡಗಿನ ಎಂಟು ಚುನಾವಣಾ ಕ್ಷೇತ್ರಗಳಿಂದ ಈ ಕೆಳಗೆ ನಮೂದಿಸಿದ ರೀತಿ ಇದೆ.

ಚುನಾವಣಾ ಕ್ಷೇತ್ರ.	ಒಟ್ಟು ಸ್ಥಳಗಳು	ಶೆಡ್ಯೂಲ್ಡ್ ಜಾತಿ	ಶೆಡ್ಯೂಲ್ಡ್ ಪಂಗಡ
ಶನಿವಾರಸಂತೆ	2	1	—
ಸೋಮವಾರಪೇಟೆ (North)	1	—	—
ಸೋಮವಾರಪೇಟೆ (South)	1	—	—
ಫ್ರೇಜರ್‌ಪೇಟೆ	1	—	—
ಸುಂಟಿಕೊಪ್ಪ	2	1	—
ಮಡಿಕೇರಿ ಟೌನ್	1	—	—
ಮೂರ್ನಾಡು	1	—	—
ಮಡಿಕೇರಿನಾಡು	1	—	—

(ii) "ನಾಮನಿರ್ದೇಶನ" ಕಾಗದಗಳನ್ನು ಈ ಕೆಳಗೆ ರುಜು ಮಾಡಿರತಕ್ಕವರಿಗೆ ಸೋಮವಾರಪೇಟೆಯಲ್ಲಿರುವ ಆವರ ಆಫೀಸಿನಲ್ಲಿ ಕೊಡಬಹುದು. ಅಥವಾ ಆವರು ಅವುಗಳನ್ನು ಸ್ವೀಕರಿಸುವುದು ಅನಿವಾರ್ಯವಾಗಿ ಸಾಧ್ಯವಾಗದೆ ಹೋದರೆ ಅವುಗಳನ್ನು ಉತ್ತರಕೊಡಗು ತಾಲೋಕಿನ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಿಗೆ ಕೊಡಬಹುದು. ಅವುಗಳನ್ನು 1951 ನೆಯ ಇಸವಿ ಡಿಸೆಂಬರ್ 4 ನೇಯ ತಾರೀಕಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ ಬೆಳಗ್ಗೆ 11 ಗಂಟೆಯಿಂದ ಅಪರಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು

(iii) "ನಾಮನಿರ್ದೇಶನ" ಕಾಗದದ ನಮೂನೆಗಳನ್ನು ಮೇಲೆ ನಮೂದಾಗಿರತಕ್ಕ ಎರ ಆಫೀಸುಗಳಲ್ಲಿ 26-11-1951ನೆಯ ತಾರೀಕಿನಿಂದ 3-12-1951 ರ ವರೆಗೆ 11 ಗಂಟೆಯಿಂದ 5-30 ಗಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮನಿರ್ದೇಶನ" ಕಾಗದಗಳನ್ನು 8-12-1951 ನೆಯ ತಾರೀಕಿನ ದಿನ ಬೆಳಿಗ್ಗೆ ಹತ್ತು ಗಂಟೆಗೆ ಸೋಮವಾರಪೇಟೆ ತಾಲೋಕು ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದ್ವಾರರಿದ್ದು ಸ್ಪರ್ಧಿಸುವ ಪಕ್ಷದಲ್ಲಿ, ಚುನಾವಣೆದಾರರು ವೋಟು ಕೊಡುವ ತಾರೀಕು ಅಥವಾ ತಾರೀಕುಗಳನ್ನೂ ಮತ್ತು ಅವರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ವರೆಗೆ ವೋಟು ಕೊಡಬಹುದೆಂಬುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಕು 26-11-1951. ಜಿ. ಸಿ. ಕಾರ್ಯಪ್ಪ,
ಉತ್ತರ ಕೊಡಗು ತಾಲೋಕು, ಸೋಮವಾರಪೇಟೆ. ರಿಟರ್ನಿಂಗ್ ಆಫೀಸರ್.

ಬಿಹಾರದಲ್ಲಿ ೩೦೦೦೦ ನಾಮಪತ್ರಗಳು.

ಬಿಹಾರದಲ್ಲಿ ಲೋಕಸಭೆಯ ೧೫ ಸ್ಥಳಗಳಿಗೂ ಶಾಸನ ಸಭೆಯು ೩೫೦ ಸ್ಥಳಗಳಿಗೂ ೩೦೦೦೦ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆಯೆಂದೂ ಅಂದಾಜುಮಾಡಲಾಗಿದೆ. ೧೭ ರಾಜಕೀಯ ಪಕ್ಷಗಳು ನಾಮಪತ್ರ ಸಲ್ಲಿಸಿವೆ.

ಹೈದರಾಬಾದಿನಲ್ಲಿ.

ಹೈದ್ರಾಬಾದ ರಾಜ್ಯದ ಶಾಸನ ಸಭೆಯ ೧೭೦ ಜಾಗೆಗಳಿಗೆ ೫೫೫ ಉಮೇದುವಾರಿಕೆ ನಾಮಪತ್ರಗಳು ಸ್ವೀಕೃತವಾಗಿವೆ. ಈ ಉಮೇದುವಾರರು ೧೧ ವಿವಿಧ ರಾಜಕೀಯ ಪಕ್ಷಕ್ಕೆ ಸೇರಿದವರು. ಈಗಾಗಲೇ ನಾಲ್ವರು ಕಾಂಗ್ರೆಸ್ ಉಮೇದುವಾರರು ಅವಿರೋಧಿಯೂಗಿ ಆರಿಸಿಬಂದಿದ್ದಾರೆ.

ಒಟ್ಟು ಸಲ್ಲಿಸಿದ ನಾಮಪತ್ರಗಳು ೧೭೫ ಜಾಗಗಳಿಗೆ ೭೫೮. ಇದರಲ್ಲಿ ೪೩ ಅರ್ಜಿಗಳು ನಿರಾಕರಿಸಲ್ಪಟ್ಟವು. ೧೫೭ ಹಿಂತೆಗೆದುಕೊಳ್ಳಲ್ಪಟ್ಟವು. ಸ್ಪರ್ಧಿಸುವ ಪಕ್ಷಗಳ ಉಮೇದುವಾರರ ಸಂಖ್ಯೆಯು ಈ ಕೆಳಗಿನಂತಿರುವುದು. ಕಾಂಗ್ರೆಸ್ ೧೭೮, ಸಮಾಜವಾದಿಗಳು, ಜನತಾ ಪ್ರಜಾ ಸತ್ತ ಪಕ್ಷ ೭೫, ದಲಿತ ವರ್ಗದ ಫೆಡರೇಷನ್ ೨೦, ಆರ್ಯ ಪ್ರಜಾಪಕ್ಷ, ರಾಮರಾಜ್ಯ ಪರಿಷತ್ ಆರು, ಲೀಗ್ ಆಫ್ ಸೋಷಾಲಿಸ್ಟರು ೩, ದಲಿತ ಜನಸಂಘ ೩, ಹಿಂದೂ ಮಹಾಸಭೆ ಒಂದು, ಸ್ವತಂತ್ರ ೧೫೫ ಸಂಯುಕ್ತ ದಲಿತ ವರ್ಗದ ಫೆಡರೇಷನ್ ೧.

ಶ್ರೀ. ನೆಹರೂರ ವಿರುದ್ಧ ಐವರ ಸ್ಪರ್ಧೆ.

ಶ್ರೀ. ನೆಹರೂ ಅವರ ವಿರುದ್ಧ ಅಲಹಾಬಾದ ಮತದಾರ ಕ್ಷೇತ್ರದಲ್ಲಿ ಒಬ್ಬ ಹಿಂದು ಮಹಾಸಭೆಯವರೂ, ಕಾಯಂಕಿಕಾರಿ ಸಮಾಜವಾದಿ ಪಕ್ಷದವರೊಬ್ಬರೂ ಮೂವರು ಸ್ವತಂತ್ರರೂ ಸ್ಪರ್ಧಿಸುವರು. ರಾಮಪುರ ಮತದಾರ ಕ್ಷೇತ್ರದಲ್ಲಿ ಮೌಲಾನಾ ಅಬ್ದುಲ್ ಕಲಂ ಆಜಾದರ ವಿರುದ್ಧ ಹಿಂದು ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಬಿಶನ್ ಚಂದ್ರಸೇನರು ನಿಲ್ಲುವರು.

ಕೇಂದ್ರ ಮಂತ್ರಿ ಶ್ರೀ. ಶ್ರೀಪ್ರಕಾಶರ ವಿರುದ್ಧ ಕಿಸಾನ ಮಜದೂರ ಪ್ರಜಾಪಕ್ಷದ ಶ್ರೀ. ಕೆ. ಕೆ. ಭಟ್ಟಾಚಾರ್ಯ, ಇಬ್ಬರು ಸ್ವತಂತ್ರರು ಹಾಗೂ ರಾಮರಾಜ್ಯ ಪರಿಷತ್ತಿ ಒಬ್ಬರು ನಿಂತಿದ್ದಾರೆ.

ಫೈಜಾಬಾದ ಜಿಲ್ಲೆಯ ವಾಯವ್ಯ ಮತದಾರ ಕ್ಷೇತ್ರದಲ್ಲಿ ಕಾಂಗ್ರೆಸು ಶ್ರೀ. ಅಲ್ಲಗಿರಿಯವರನ್ನು ಆಚಾರ್ಯ ಜೆ. ಬಿ. ಕೃಪಲಾನಿಯವರ ವಿರುದ್ಧ ನಿಲ್ಲಿಸಿದೆ.

ಕಾಂಗ್ರೆಸಿನ ಮಿ. ಆಫಿ ಅಹ್ಮದ್ ಕಿಡ್ವಾಯಿಯವರ ವಿರುದ್ಧ ಜನಸಂಘದ ಒಬ್ಬರು ಹಾಗೂ ಒಬ್ಬರು ಸ್ವತಂತ್ರರು ನಿಂತಿದ್ದಾರೆ.

ಕಾಂಗ್ರೆಸಿನ ಶ್ರೀ ಕೃಷ್ಣದತ್ತ ಪಾಲಿವಾಲರ ವಿರುದ್ಧ ಪಂಡಿತ ಹೃದಯನಾಥ ಕುಂಜು ಅವರು ನಿಂತಿದ್ದಾರೆ. ಮೂವರು ಸ್ವತಂತ್ರ ಹುರಿಯಾಳುಗಳು ಮಂತ್ರಿ ಶ್ರೀ. ವಾಜಪೇಯಿ ಕ್ಯಾಗಿಯವರನ್ನು ಪ್ರತಿಸ್ಪರ್ಧಿಸುವರು.

ಚುನಾವಣಾ ವಾರ್ತೆಗಳು.

ಭಾರತದ ಚುನಾವಣೆಯ ವಿಶೇಷ ಮಾಹಿತಿಗಳು

ಮತದಾರರ ಸಂಖ್ಯೆ	೧೭೭ ಕೋಟಿ ೭೬ ಸಾವಿರ
ಮತಗಟ್ಟೆಗಳು	೨ ಲಕ್ಷ ೨೪ ಸಾವಿರ
ಪ್ರತಿಯೊಂದು ಮತಗಟ್ಟೆಗೆ	ಓರ್ವ ಪ್ರಿಸಾಯಿಡಿಂಗ ಆಫಿಸರ ೫ ಕಾರಕೂನರು ೪ ಪೋಲೀಸರು
ಪ್ರಿಸಾಯಿಡಿಂಗ ಅಧಿಕಾರಿಗಳು	೫೬,೦೦೦
ಕಾರಕೂನರು	೨,೮೦,೦೦೦
ಪೋಲೀಸರು	೩,೨೦,೦೦೦
ಒಟ್ಟು ವೆಚ್ಚ ಸು	೧೮ ಕೋಟಿ ರೂ. ಗಳು
ಒಟ್ಟು ಸ್ಥಳಗಳು	೪೪೧೨
ಮತದಾರರ ಕ್ಷೇತ್ರಗಳು	೨೨೪

ಬೊಂಬಾಯಿ.

ಬೊಂಬಾಯಿ ರಾಜ್ಯದಲ್ಲಿ ಚುನಾವಣೆಗೆ ನಾಮಪತ್ರಗಳನ್ನು ಕೊಡುವ ಕೊನೆಯ ದಿನ ತಾ. ೨೪ ರ ಮಧ್ಯಾಹ್ನ ಮೂರು ಘಂಟೆಯ ಹೊತ್ತಿನ ವರೆಗೆ ಮುಂಬೈರಾಜ್ಯದ ಲೋಕಸಭೆಯ ೪೫ ಜಾಗೆಗಳಿಗೂ ಶಾಸನ ಸಭೆಯ ೩೧೫ ಜಾಗೆಗಳಿಗೂ ಒಟ್ಟು ೧೫೦೦ ನಾಮಪತ್ರಗಳು ಬಂದಿವೆ ಎಂದು ಅಂದಾಜು ಮಾಡಲಾಗಿದೆ. ಡವಿ ನಾಮಪತ್ರಗಳನ್ನು ಹೊರತುಪಡಿಸಿದರೂ ೧೨೦೦ ಜನ ಉಮೇದುವಾರರು ಚುನಾವಣೆಯ ರಂಗಕ್ಕೆ ಇಳಿಯಬಹುದೆಂದು ನಿರೀಕ್ಷಿಸಿದೆ.

ಮದ್ರಾಸ್.

ಮದ್ರಾಸ್ ರಾಜ್ಯದ ತ್ರಿಚಿಲ್ಲ ಮುಂಬರುವ ಚುನಾವಣೆಗಳಿಗಾಗಿ ೨೬೯೦ ಕ್ಕೆ ಮೇಲ್ಪಟ್ಟ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆಯೆಂದು ಸರಕಾರಕ್ಕೆ ಬಂದ ಸುದ್ದಿಯಿಂದ ತಿಳಿದಿದೆ. ಚುನಾವಣೆಗಳಲ್ಲಿ ೧೫ ಪಕ್ಷಗಳು ಭಾಗವಹಿಸುವವು. ಆದರೆ ಕಾಂಗ್ರೆಸ್ಸಿನ ವಿರುದ್ಧ ಹೋರಾಡುವರಲ್ಲಿ ಮುಖ್ಯರಾರೆಂದರೆ ಕಮ್ಯೂನಿಷ್ಟರು, ಸಮಾಜವಾದಿಗಳು, ಕಿಸಾನ ಮಜದೂರ ಪ್ರಜಾಪಕ್ಷದವರು ಹಾಗೂ ಸ್ವತಂತ್ರರು. ಈ ರಾಜ್ಯದಲ್ಲಿ ೧೩ ಕಾಯ್ದಿಟ್ಟ ಸ್ಥಳಗಳನ್ನೊಳಗೊಂಡು ಪಾರ್ಲಿಮೆಂಟಿನ ೭೫ ಸ್ಥಳಗಳಿವೆ. ಇದು ವರೆಗೆ ೭೦ ಮತದಾರ ಕ್ಷೇತ್ರಗಳಿಗೆ ೩೯೫ ಜನರು ಸ್ಪರ್ಧಿಸುವರು. ಚುನಾವಣೆಗಳಲ್ಲಿ ೧೫ ಅಖಿಲ ಭಾರತ ಪಕ್ಷಗಳೂ ೬ ಪ್ರಾಂತಿಕ ಪಕ್ಷಗಳು ಭಾಗವಹಿಸಿವೆ.

ಡಾ|| ಭಾರ್ಗವರು ಕಿಸಾನ ಮಜ್ದೂರ ಪ್ರಜಾಪಕ್ಷಕ್ಕೆ?

ಇತ್ತೀಚೆಗೆ ಕಾಂಗ್ರೆಸಿನ ಸಂಬಂಧ ಕಡಿದುಕೊಂಡ ಡಾ. ಗೋಪಿಚಂದ ಭಾರ್ಗವರವರು ಕಿಸಾನ ಮಜದೂರ ಪ್ರಜಾಪಕ್ಷಕ್ಕೆ ಸೇರುವರೆಂದು ತಿಳಿದು ಬಂದಿದೆ. ಈ ಬಗ್ಗೆ ಡಾ. ಭಾರ್ಗವರವರು ಕೂಡಲೇ ಔಪಚಾರಿಕವಾಗಿ ಘೋಷಿಸುವ ನಿರೀಕ್ಷಣೆ ಇದೆ. ಆ ಪಕ್ಷ ಸೇರುವದರ ಬಗ್ಗೆ ವಿವರಗಳನ್ನು ಪೂರ್ತಿಗೊಳಿಸಲು ಕಿಸಾನ ಮಜದೂರ ಪ್ರಜಾಪಕ್ಷದ ಪುರೇಣರನ್ನು ಕಾಣಲು ಡಾ. ಭಾರ್ಗವರು ಡೆಲ್ಲಿಗೆ ತೆರಳಿದರು.

ಉತ್ತರ ಪ್ರದೇಶ.

ಉತ್ತರ ಪ್ರದೇಶದಲ್ಲಿ ಒಂದು ಸಾವಿರ ನಾಮಪತ್ರಗಳು ಸಲ್ಲಿಸಲ್ಪಟ್ಟಿವೆ. ಇದು ವರೆಗೆ ಲೋಕಸಭೆ ಮತ್ತು ಶಾಸನ ಸಭೆಗಳಿಗೆ ೧೫೦೦೦ ನಾಮಪತ್ರಗಳು ಬಂದಿರುವವು.

ರಾಮಪುರ ಜಿಲ್ಲೆಯಿಂದ ಮೌಲಾನಾ ಆಜಾದರು ಲೋಕಸಭೆಗೆ ನಾಮಪತ್ರವನ್ನು ಸಲ್ಲಿಸಿದರು. ಬಿಷನಚಂದ್ರ ಸೇಟ್ (ಹಿಂದೂ ಮಹಾಸಭೆ) ಯ ಪ್ರಧಾನ ಕಾರ್ಯದರ್ಶಿಯವರು ಇವರಿಗೆ ಪ್ರತಿಸ್ಪರ್ಧಿಯಾಗಿ ನಿಂತಿರುವರು.

ಲಕ್ನೋದಲ್ಲಿ ವಿಜಯಲಕ್ಷ್ಮಿ ಪಂಡಿತರು ಲೋಕಸಭೆಗೆ ತಮ್ಮ ನಾಮಪತ್ರವನ್ನು ಸಲ್ಲಿಸಿದವರು. ಇದೇ ಮತಕ್ಷೇತ್ರದಿಂದ ಮಿ. ನಾಥುರಾಮರವರು ಸ್ವತಂತ್ರ ಉಮೇದುವಾರರಾಗಿ ನಾಮಪತ್ರ ಸಲ್ಲಿಸಿರುವರು. ತೆಹಾರಿಗರವಾಲ ಮಹಾರಾಜರು ಲೋಕಸಭೆಗೆ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಂಡರು.

Representation of the people (Conduct of Elections and Election Petitions) Rules.

೧೯೫೧ರ ಸೆನೇ ನಿಬಂಧನೆಗನುಸಾರವಾಗಿ ನೋಟಿಸ್.

ಕೊಡಗು ವಿಧಾನ-ಸಭೆಯ (Coorg Legislative Assembly) ದಕ್ಷಿಣಕೊಡಗು ತಾಲೂಕಿನ ಹತ್ತು ಚುನಾವಣೆ ಸ್ಥಾನಗಳಿಂದ 1952ನೇಯ ಇಸವಿ ಫೆಬ್ರವರಿ 5 ನೆಯ ತಾರೀಕಿನ ದಿನ ಅಥವಾ ಅದಕ್ಕೆ ಮುಂಚಿತವಾಗಿ 14 ಮಂದಿ ಸದಸ್ಯರುಗಳನ್ನು ಚುನಾಯಿಸಬೇಕೆಂದು ಕೋರಲ್ಪಟ್ಟಿರುವುದರಿಂದ, ಮೇಲೆ ಸೂಚಿತವಾದ ಚುನಾವಣೆಸ್ಥಾನದ ರಿಟರ್ನಿಂಗ್ ಆಫೀಸರಾದ ಶ್ರೀ ಬಿ. ಬಿ. ಅಪ್ಪಯ್ಯ ಎಂಬ ಹೆಸರಿನವನಾದ ನಾನು ಈ ಕೆಳಗೆ ಕಂಡಂತೆ ಈ ಮೂಲಕ ಸಮಸ್ತ ಜನರ ತಿಳುವಳಿಕೆಗಾಗಿ ಈ ಕೆಳಗಿನ ಪಬ್ಲಿಕ್ ನೋಟೀಸು ಕೊಟ್ಟಿದ್ದೇನೆ:-

ಪಬ್ಲಿಕ್ ನೋಟೀಸ್.

(i) ಚುನಾಯಿಸತಕ್ಕವರ ಸಂಖ್ಯೆಯು ದಕ್ಷಿಣ ಕೊಡಗು ತಾಲೂಕಿನ ಹತ್ತು ಚುನಾವಣಾ ಕ್ಷೇತ್ರಗಳಾಗಿ ಈ ರೀತಿ ನಮೂದಿಸಲಾಗಿದೆ.

ಚುನಾವಣಾ ಕ್ಷೇತ್ರ	ಒಟ್ಟು ಸ್ಥಳಗಳು	ಶೆಡ್ಯೂಲ್ಡ್ ಜಾತಿ	ಶೆಡ್ಯೂಲ್ಡ್ ಪಂಗಡ
ಶ್ರೀಮಂಗಲ	2	—	1
ಹುದಿಕೇರಿ	1	—	—
ಪೊನ್ನಂಪೇಟಿ	2	—	1
ಬೆಟ್ಟತ್ತೂನಾಡು	1	—	—
ವೀರರಾಜಪೇಟಿ ಟೌನ್	1	—	—
ವೀರರಾಜಪೇಟಿ ನಾಡು	2	1	—
ಅಮ್ಮತ್ತಿ	1	—	—
ಸಿದ್ದಾಪುರ	2	—	1
ನಾಪೋಕ್ಲು	1	—	—
ಭಾಗಮಂಡ್ಲ	1	—	—

(ii) "ನಾಮಿನೇಶನ್" ಕಾಗದಗಳನ್ನು ಈ ಕೆಳಗೆ ರುಜು ಮಾಡಿರತಕ್ಕವರಿಗೆ ವೀರಾಜಪೇಟೆಯಲ್ಲಿರುವ ಅವರ ಆಫೀಸಿನಲ್ಲಿ ಕೊಡಬಹುದು, ಅಥವಾ ಅವರು ಅವುಗಳನ್ನು ಸ್ವೀಕರಿಸುವುದು ಅನಿವಾರ್ಯವಾಗಿ ಸಾಧ್ಯವಾಗದೆ ಹೋದರೆ ಅವುಗಳನ್ನು ದಕ್ಷಿಣ ಕೊಡಗಿನ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರಿಗೆ ಕೊಡಬಹುದು. ಅವುಗಳನ್ನು 1951 ನೆಯ ಇಸವಿ ಡಿಸೆಂಬರು 4 ನೆಯ (ತಾರೀಕಿನ) ದಿನ ಅಥವಾ ಮುಂಚಿತವಾಗಿ ಬೆಳಿಗ್ಗೆ 11 ಗಂಟೆಯಿಂದ ಅಪರಾಹ್ನ 3 ಗಂಟೆಯ ಒಳಗಾಗಿ ಕೊಡಬೇಕು.

(iii) "ನಾಮಿನೇಷ್" ಕಾಗದ ಸೆಮೂನೆಗಳನ್ನು ಮೇಲೆ ನಮೂದಾಗಿರತಕ್ಕವರ ಆಫೀಸುಗಳಲ್ಲಿ 26-11-1951 ತಾರೀಕಿನಿಂದ 3-12-1951 ನೆಯ ತಾರೀಕಿನ ವರೆಗೆ 11 ಗಂಟೆಯಿಂದ 5-30 ಗಂಟೆಯ ವರೆಗೆ ಯಾವಾಗ ಬೇಕಾದರೂ ಪಡೆಯಬಹುದು.

(iv) "ನಾಮಿನೇಷ್" ಕಾಗದಗಳನ್ನು 8-12-1951 ನೇಯ ತಾರೀಕಿನ ದಿನ ಪೂರ್ವಾಹ್ನ ಹತ್ತು ಗಂಟೆಗೆ ವೀರಾಜಪೇಟೆಯ ತಾಲೂಕು ಆಫೀಸಿನಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

(v) ಎಷ್ಟು ಜನ ಸದಸ್ಯರುಗಳು ಚುನಾಯಿಸಲ್ಪಡಬೇಕೋ ಅಷ್ಟಕ್ಕಿಂತಲೂ ಹೆಚ್ಚು ಮಂದಿ ಉಮೇದ್ವಾರರಿದ್ದು ಸ್ಪರ್ಧಿಸುವ ಪಕ್ಷದಲ್ಲಿ ಚುನಾವಣೆದಾರರು ವೋಟು ಕೊಡುವ ತಾರೀಕು ಅಥವಾ ತಾರೀಕುಗಳನ್ನು ಮತ್ತು ಅವರು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ವರೆಗೆ ವೋಟು ಕೊಡಬಹುದೆಂಬುದನ್ನೂ ಪ್ರತ್ಯೇಕವಾಗಿ ತಿಳಿಸಲಾಗುವುದು.

ತಾರೀಕು 26-11-1951. **ಬಿ. ಬಿ. ಅಪ್ಪಯ್ಯ.**

ವಿಳಾಸ:-ತಾಲೂಕು ಆಫೀಸು, ವೀರಾಜಪೇಟೆ, ರಿಟರ್ನಿಂಗ್ ಆಫೀಸರ್.

ಕಾಂಗ್ರೆಸ್ ಮತ್ತು ರಚನಾತ್ಮಕ ಕಾರ್ಯಕರ್ತರು

ಬಿಹಾರ ಚರಖಾ ಸಂಘದ ಶ್ರೀ ಲಕ್ಷ್ಮೀನಾರಾಯಣರೂ ಅವರ ಸಹಕಾರಿಗಳೂ ಹಿಂದಿಯಲ್ಲಿ ಒಂದು ಪರಿಪತ್ರವನ್ನು ಹೊರಡಿಸಿದ್ದಾರೆ. ಅದನ್ನು ಸ್ವಲ್ಪ ಸಂಕ್ಷಿಪ್ತ ರೂಪದಲ್ಲಿ ಕೆಳಗೆ ಕೊಡಲಾಗಿದೆ.

ಸ್ವಾತಂತ್ರ್ಯ ದೊರೆತ ನಂತರದ ಮೊದಲನೇ ಸಾರ್ವತ್ರಿಕ ಚುನಾವಣೆಗಳ ಸಂಬಂಧದಲ್ಲಿ ಕಾಂಗ್ರೆಸ್ ತನ್ನ ಘೋಷಣಾಪತ್ರವನ್ನು ಹೊರಡಿಸಿದೆ. ಅಹೊಂದು ಮಹತ್ವದ ಲೇಖನವಾಗಿದೆ. ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿದ್ದಾಗ ಕಾಂಗ್ರೆಸು (ಮುಂದೆ ಇಲ್ಲಿಉಲ್ಲೇಖಿಸಲ್ಪಡುವ) ಕಲ ಸಾಮಾಜಿಕ ಮತ್ತು ಆರ್ಥಿಕ ಮೂಲ ತತ್ವಗಳನ್ನು ಅಂಗೀಕರಿಸಿತ್ತು. ಅನೇಕ ಜನರಿಗೆ ಪ್ರಾತ್ಯಕ್ಷಿಕ ರಾಜಕಾರಣದಲ್ಲಿ ಏನೂ ಆಸ್ಥೆ ಇದ್ದಿಲ್ಲವಾದರೂ ಈ ಮೂಲ ತತ್ವಗಳಲ್ಲಿ ಆಕರ್ಷಿಯಿತ್ತು. ಈ ಆಸಕ್ತಿಯ ಕಾರಣದಿಂದಲೇ ಅವರು ಕಾಂಗ್ರೆಸ್ಸಿನಲ್ಲಿ ಸೇರಿದರು. ಕಾಂಗ್ರೆಸ್ಸಿನ ಪ್ರಸ್ತುತ ಘೋಷಣೆಯು ಈ ಮೂಲ ತತ್ವಗಳ ಸಂಬಂಧದದಲ್ಲಿ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಸೂಚಿಸುತ್ತದೆಂದು ನಾವು ಗ್ರಹಿಸಬೇಕು. ಕಾಂಗ್ರೆಸಿಗೆ ಆಧೀನವಾದ ಸರಕಾರಗಳ ಧೋರಣವುಅಷ್ಟೇನೂ ಪ್ರೋತ್ಸಾಹಕವಾಗಿದ್ದಿಲ್ಲೆಂದು ಎಲ್ಲರಿಗೂ ಗೊತ್ತಿದೆ. ಆದರೆ ಪ್ರಸ್ತುತ ಘೋಷಣೆಯನ್ನು ನೋಡಿದರೆ ಈ ಮೂಲ ತತ್ವಗಳ ಬಗ್ಗೆ ಕಾಂಗ್ರೆಸ್ಸು ತನ್ನ ನಿಲುವೆಯನ್ನೇ ಬದಲಿಸಿದೆಯೆಂದು ವ್ಯಕ್ತವಾಗುವುದು.

ಆಡಳಿತದಲ್ಲಿ ಬಂದ ಅನುಭವಗಳ ಮೇಲಿಂದ ತನ್ನ ಹಿಂದಿನ ಅಭಿಪ್ರಾಯಗಳನ್ನೂ ಧ್ಯೇಯಗಳನ್ನೂ ಬಿಟ್ಟ ಬಿಡಲು ಪ್ರತಿಯೊಂದು ವ್ಯಕ್ತಿಗೂ ಸಂಸ್ಥೆಗೂ ಹಕ್ಕಿದೆ. ಈ ಬಗ್ಗೆ ನಮ್ಮದೇನೂ ದೂರಿಲ್ಲ. ಆದರೆ ಕಾಂಗ್ರೆಸಿನ ಹೊಸ ಘೋಷಣೆಯನ್ನು ಅನುಲಕ್ಷಿಸಿ ಕಾಂಗ್ರೆಸಿನೊಡನೆ ನಮಗಿರುವ ಸಂಬಂಧವನ್ನು ನಾವು ಪುನರ್ವಿಮರ್ಶಿಸಬೇಕಾದ ಕಾಲವೀಗ ಒದಗಿದೆಯೆಂದು ಅನಿಸುತ್ತದೆ.

ಘೋಷಣೆಯ ಪ್ರಾರಂಭದಲ್ಲಿ ಗಾಂಧೀಜಿಯ ರೀತಿ, ನೀತಿ ಮತ್ತು ಕಾರ್ಯದ ಉಲ್ಲೇಖವಿದೆ. ನಮ್ಮ ಅಭಿಪ್ರಾಯದಲ್ಲಿ, ಈ ಘೋಷಣೆಯಲ್ಲಿ ಗಾಂಧೀಜಿಯ ಹೆಸರನ್ನು ಎಳೆದು ತರುವ ಅವಶ್ಯಕತೆಯೇನೂ ಇದ್ದಿಲ್ಲ; ಏಕೆಂದರೆ ಗಾಂಧೀವಾದಿ ಕಾಂಗ್ರೆಸ್ಸಿನ ಮೂಲ ತತ್ವಗಳನ್ನು ಅಂಗೀಕರಿಸಲು ಈ ಘೋಷಣೆ ಸಿದ್ಧವಿಲ್ಲ.

ಸ್ವಾತಂತ್ರ್ಯ ಸಮರ ನಡೆಯುತ್ತಿದ್ದಾಗಲೂ ಪರಕೀಯರ ನೊಗದಿಂದ ಭಾರತವನ್ನು ಮುಕ್ತಗೊಳಿಸುವುದೊಂದೇ ಅದರ ಉದ್ದೇಶವಾಗಿದ್ದಿಲ್ಲ. ದಾರಿದ್ರ್ಯ ಮತ್ತು ಶೋಷಣೆಯಿಂದ ಜನತೆಯನ್ನು ವಿಮೋಚಿಸುವುದೂ ಧ್ಯೇಯವಾಗಿತ್ತೆಂದು ಕಾಂಗ್ರೆಸ್ ಘೋಷಣೆಯಲ್ಲಿ ಹೇಳಿದೆ. ಆದರೆ ತನ್ನ ಹಿಂದಿನ ಧೋರಣೆಯನ್ನು ಅನುಲಕ್ಷಿಸಿಯೂವ ರೀತಿಯಲ್ಲಿ ಈ ಧ್ಯೇಯವನ್ನು ಸಾಧಿಸಲು ಅದು ಅಪೇಕ್ಷಿಸುತ್ತಿದೆಯೆಂದು ಅದರಲ್ಲಿ ಎಲ್ಲಿಯೂ ಹೇಳಿಲ್ಲ ಆ ಧೋರಣೆಯೀಗ ತುಂಬ ಬದಲಾವಣೆ ಹೊಂದಿದೆ. ಮೊದಲನೆಯ ಹಾಗಿ ಗಾಂಧೀಜಿ ಗ್ರಾಮವನ್ನು ಸ್ವರಾಜ್ಯದ ಪ್ರಾಥಮಿಕ ಘಟಕವೆಂದು ಕಲ್ಪಿಸಿದ್ದರು. ಹಳ್ಳಿಗಳನ್ನು ಮೂಲ ಅವಶ್ಯಕತೆಗಳ ವಿಷಯದಲ್ಲಿ ಸ್ವಯಂಪೂರ್ಣವಾಗಿ ಮಾಡುವ ಮೂಲಕ ಸ್ವಾತಂತ್ರ್ಯವು ಹಳ್ಳಿಗಳಲ್ಲಿ ಬೇರೂರುವಂತೆ ಮಾಡಬೇಕೆಂದು ಅವರು ಬಗೆದಿದ್ದರು. ಆದ್ದರಿಂದ ಅವರು ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಅಗ್ರಸ್ಥಾನವಿತ್ತು ಸ್ವಾತಂತ್ರ್ಯದ ಹೋರಾಟದ ಕಾರ್ಯಕ್ರಮದಲ್ಲಿ ಅವನ್ನೇ ಮುಖ್ಯಾಂಗಗಳಾಗಿ ಮಾಡಿದ್ದರು.

ಮೇಲ್ಕಾಣಿಸಿದ ಘೋಷಣೆಯಲ್ಲಿ ಇಂಥದೇನೂ ಇಲ್ಲವೇ ಇಲ್ಲ. ಬದಲಿಗೆ ಅದರಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರಗಳು ಗಾಂಧೀಜಿಯ ಕಲ್ಪನೆಗೆ ಬದ್ಧ ವಿರುದ್ಧವಾಗಿವೆ. ಸಹಕಾರಿ ಒಕ್ಕಲುತನವನ್ನು ಕೈಕೊಳ್ಳಬೇಕೆಂದು ಅದು ಹೇಳುತ್ತದೆ; ಆದರೆ ವಿದೇಶಗಳಿಂದ ತರಿಸಿದ ಪೆಟ್ರೋಲ್ ಅಥವಾ ಕೂಡಾಯಿಲ್‌ನಿಂದ ನಡೆಯುವ ಟ್ರ್ಯಾಕ್ಟರುಗಳನ್ನು ಈ ಬಗ್ಗೆ ಎಷ್ಟು ಮಟ್ಟಿಗೆ ಉಪಯೋಗಿಸಲಾಗುವುದು, ಕೃತಕ ಗೊಬ್ಬರದ ಸಹಾಯವನ್ನು ಪಡೆಯಲಾಗುವುದೇ, ಎತ್ತು, ಹಟ್ಟಿಯ ಗೊಬ್ಬರ ಮತ್ತು ಹಳ್ಳಿಯ ನಿತ್ಯದ ಮಲ ಮೂತ್ರಾದಿಗಳ ಉಪಯೋಗದ ಬಗ್ಗೆ ಅದರ ಧೋರಣವೇನೆಂಬುದಕ್ಕೆ ಎಲ್ಲಿಯೂ ಉತ್ತರವಿಲ್ಲ.

ಅದೇ ಪ್ರಕಾರ ಘೋಷಣೆಯಲ್ಲಿ ಗ್ರಾಮೋದ್ಯೋಗಗಳಿಗೆ ಸ್ಥಾನವನ್ನು ಕೊಟ್ಟಿಲ್ಲ. 'ಚಿಕ್ಕಪುಟ್ಟ ಮತ್ತು ಮನೆ ಕೈಗಾರಿಕೆ'ಗಳ ಉಲ್ಲೇಖ ಮಾತ್ರ ಇದೆ. ಚಿಕ್ಕಪುಟ್ಟ ಮತ್ತು ಮನೆ ಕೈಗಾರಿಕೆಗಳಿಗೂ ಗ್ರಾಮೋದ್ಯೋಗಗಳಿಗೂ ಇರುವ ಬೇಧವನ್ನು ವಿವರಿಸುವ ಅವಶ್ಯಕತೆಯೇ ಇಲ್ಲ. ಗ್ರಾಮೋದ್ಯೋಗಗಳೆಂದರೆ ಹಳ್ಳಿಯ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸುವ ಉದ್ಯಮಗಳು. ಅವುಗಳ ಮೇಲೆಯೇ ಹಳ್ಳಿಗಳ ಸ್ವಾವಲಂಬನೆ ನಿರ್ಭರವಾಗಿದೆ. ಅವುಗಳಲ್ಲದ ಹಳ್ಳಿ ಎಷ್ಟು ಸಮೃದ್ಧವಾಗಿದ್ದರೂ ಅದು ಹೊರಗಿನಿಂದ ಎಲ್ಲ ಪದಾರ್ಥಗಳನ್ನೂ ತರಿಸಿಕೊಳ್ಳುವ ಒಂದು ಸೆರೆಮನೆಯೇ ಸೈ. ಇದರ ಬದಲು ಮನೆ ಕೈಗಾರಿಕೆ, ಚಿಕ್ಕಪುಟ್ಟ ಉದ್ಯಮಗಳೆಂದರೆ ಜನರಿಗೆ ಅಲ್ಪಸ್ವಲ್ಪ ಹಣವನ್ನು ಸಂಗ್ರಹಿಸುವ ಸಾಧನಗಳು ಮಾತ್ರ. "ಕೃಷಿಭೂವಿಯನ್ನು ಅವಲಂಬಿಸುವ ಜನರ ಸಂಖ್ಯೆ ವಿಪರೀತವಿದ್ದರಿಂದ ಅದರ ಮೇಲೆ ಬಿದ್ದಿರುವ ಭಾರವನ್ನು ಕಡಿಮೆ ಮಾಡಲು ಈ ಜನರಲ್ಲಿ ಕೆಲವರನ್ನು ಇತರ ವೃತ್ತಿಗಳ ಕಡೆ ಹೊರಳಿಸುವುದವಶ್ಯ. ಕೆಲವರನ್ನು ದೊಡ್ಡ ಉದ್ದಿಮೆಗಳಿಗೆ ಹೊರಳಿಸಬಹುದು ಆದರೆ ಅಧಿಕಾಂಶ ಜನರ ಉಪಜೀವಿಕೆಗೆ ಚಿಕ್ಕಪುಟ್ಟ ಮತ್ತು ಮನೆ ಕೈಗಾರಿಕೆಗಳೇ ಮುಖ್ಯ ಸಾಧನವಾಗಬಲ್ಲವು" ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಯಾವ ಚಿಕ್ಕಪುಟ್ಟ ಅಥವಾ ಮನೆಕೈಗಾರಿಕೆಗಳನ್ನು ಕೈಕೊಂಡರೂ ಅವುಗಳನ್ನು ಅತ್ಯುತ್ತಮ ತಂತ್ರಗಳಲ್ಲಿಯೇ ನಡೆಸಬೇಕೆಂದೂ ಅವುಗಳು ಆರ್ಥಿಕ ದೃಷ್ಟಿಯಿಂದ ಅತ್ಯಂತ ಉಪಯುಕ್ತವೂ ಕಾರ್ಯಕ್ಷಮವೂ ಆಗುವುದವಶ್ಯವೆಂದೂ ಎಚ್ಚರಿಕೆ ಕೊಡಲಾಗಿದೆ. ಇದರ ಪರಿಣಾಮವೂ ಬ್ರಿಟಿಶ ಧೋರಣದ ಪರಿಣಾಮವೂ ಬ್ರಿಟಿಶ ಧೋರಣದ ಪರಿಣಾಮದಂತೆ ಆಗಲಾರದೆ? ಮನೆ ಕೈಗಾರಿಕೆ ಅಂದರೆ ಕೈಯಿಂದ ಚಕ್ರ ತಿರುಗಿಸುವುದು, 'ಕಾರ್ಯಕ್ಷಮತೆ'ಯಲ್ಲಿಂದು ತೆಗಳಿ ಚಕ್ರದ ನಿರಣಿಗಳನ್ನು ಸ್ಥಾಪಿಸಲಾಗುವುದು; ಗಾಣದೆಣ್ಣೆಯ ಸ್ಥಾನವನ್ನು ವಿಲ್ ಎಣ್ಣೆ ಮತ್ತು ವನಸ್ಪತಿ ಆಕ್ರಮಿಸುವುವು; ನಿರುದ್ಯೋಗ ನಿವಾರಣೆಗಾಗಿ ಜವಾನಿ ಆಟಿಗೆ ಸಾಮಾನುಗಳ ಯಂತ್ರಗಳನ್ನು ಹಳ್ಳಿಗಳಿಗೆ ಕಳಿಸಲಾಗುವುದು; ಅಂತೂ ಇಂತೂ ಜನರಿಗೆ ಆರ್ಥಿಕ ಸೌಖ್ಯವನ್ನು ಒದಗಿಸಲು ಯತ್ನಿಸಲಾಗುವುದು. ಹಳ್ಳಿಗಳಲ್ಲಿ ಹಳ್ಳಿಗರ ಪ್ರೇರಣಾ ಶಕ್ತಿಯಿಂದಲೇ, ಹಳ್ಳಿಗಳಲ್ಲೇ ಲಭ್ಯವಾಗಬಹುದಾದ ಯಂತ್ರ ಶಕ್ತಿ, ಕಾರ್ಯ ಕೌಶಲ ಅಥವಾ ತಂತ್ರಜ್ಞರ ಬಲಧಿಂದ ಹಳ್ಳಿಗರ ನಿತ್ಯದ ಅವಶ್ಯಕತೆಗಳನ್ನು ಪೂರೈಸುವುದು ಗ್ರಾಮೋದ್ಯೋಗಗಳ ಮೂಲೋದ್ದೇಶವಾಗಿತ್ತು. ಗಾಂಧೀಜಿಯ ಹೆಸರನ್ನು ಸ್ಮರಿಸಿಯೂ ಈ ಕಲ್ಪನೆಯನ್ನು ಮೂಲೆಗೊತ್ತಲಾಗಿದೆಯಲ್ಲವೇ?

ಜನರಲ್ಲಿ ಏನೂ ಸಂಶಯ ಉಳಿಯಕೂಡದೆಂದೋ ಏನೋ ಪ್ರಾಣಿಯ ಸ್ಥಾನದಲ್ಲಿ **ಯಮುಗ್ಗದ ಉದ್ದಿಮೆಯನ್ನು ಕೂರಿಸಲಾಗಿದೆ.** ಕೈಮಗ್ಗವು ನಮ್ಮ ಮುಖ್ಯ ಮನೆ ಕೈಗಾರಿಕೆಯಾದ್ದರಿಂದ ಅದಕ್ಕೆ ಸರಕಾರದಿಂದ ಎಲ್ಲ ಬಗೆಯ ಸಹಾಯ ನೀಡಲಾಗುವುದೆಂದು ಹೇಳಿದೆ. ಈವರೆಗೆ ನೂಲಿನ ಕೊರತೆಯಿಂದ ಈ ಉದ್ಯಮಕ್ಕೆ ತೊಂದರೆಯಾಗಿತ್ತು. ಆದರೆ ಇನ್ನು ಮುಂದೆ ಸಾಕಷ್ಟು ನೂಲು ಕೈಮಗ್ಗಗಳಿಗೆ ದೊರಕುವಂತೆ ಸರಕಾರ ನೋಡಿಕೊಳ್ಳಬೇಕು. ಗಿರಣಿ ನೂಲಿನಿಂದ ನಡೆಯುವ ಕೈಮಗ್ಗಗಳು ನಮ್ಮ ಮುಖ್ಯ ಮನೆ ಕೈಗಾರಿಕೆಯೆಂದು ಕಾಂಗ್ರೆಸ್ಸು ಇಂದು ಕಂಠೋಕ್ತವಾಗಿ ಸಾರುತ್ತಿದೆ! ನಾವು ಇದನ್ನೇ ಒಪ್ಪಬೇಕೆಂದು ಬ್ರಿಟಿಷರು ಹೇಳುತ್ತಿದ್ದರು ಮತ್ತು ಚರಖಾ ಸಂಘವು ಗಾಂಧೀಜಿಯ ನೇತೃತ್ವದಲ್ಲಿ ದೀರ್ಘ ಕಾಲ ವಿರೋಧಿಸಿದ್ದೂ ಈ ತತ್ವವನ್ನೇ ಅಲ್ಲವೇ?

ಇದೇನೇ ಇರಲಿ, ಇಂದಿನ ಕಾಂಗ್ರೆಸ್ ಧೋರಣೆಯನ್ನು 'ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿ ಮಾಡಿದ್ದಕ್ಕಾಗಿ ನಾವು ಈ ಘೋಷಣೆಯ ಕರ್ತೃವಿಗೆ ಋಣಿಗಳಾಗಿರತಕ್ಕದ್ದು. ಕಾಂಗ್ರೆಸ್ ಆಳಿಕೆಯಲ್ಲಿ ಹಳ್ಳಿಗರು ಎಷ್ಟೇ ತಿಂದುಂಡು ಉಟ್ಟುತೊಟ್ಟು ಸುಖವಾಗಿದ್ದರೂ ಅವು ದೊಡ್ಡ ಉದ್ದಿಮೆಗಳನ್ನು ನಡೆಸುವ ನಗರಗಳಿಗೆ ಆಧೀನವಾಗಿರುವುದೇ ಸರಿಯೆಂದು ನಮಗೀಗ ಚೆನ್ನಾಗಿ ತಿಳಿಯಿತು.

ವನಸ್ಪತಿ ಉದ್ದಿಮೆಯನ್ನು ಅನವಶ್ಯಕವಾಗಿ ವಿಸ್ತರಿಸಿ ದೇಶದ ಪಶುಸಂಪತ್ತಿಯನ್ನು ಹಾಳುಮಾಡಲು ಕಾರಣವಾದ ಮೂಲ ಭೂತ ಮತಭೇದವಿದೇ. ಈ ಭೇದವೇ ಕೈಯಿಂದ ಚಕ್ರ ತಿರುಗಿಸುವ ಉದ್ದಿಮೆಯನ್ನು ಕೊಂದದ್ದು, ಗಾಣದ ಉದ್ದಿಮೆಯನ್ನು ಕೊಡಹಿದ್ದು, ಬೆಲ್ಲ ತಯಾರಿಕೆಯನ್ನು ಪ್ರತಿಬಂಧಿಸಿದ್ದು- ಮತ್ತು ಇನ್ನೂ ಅನೇಕ ಗ್ರಾಮೋದ್ಯೋಗಗಳನ್ನು ಗತಿಗಾಣಿಸಿದ್ದು. ಗಾಂಧೀಜಿ ಸತ್ಯಾಗ್ರಹವನ್ನು ಹೂಡಲು ಕಾರಣವಾದ ಉನ್ನತ ತತ್ವಗಳಿಂದ ಎಂಥ ಆಧಃಪತನವಿದು! ಸಮಸ್ತ ಹೇಳಿಕೆಯನ್ನು ದೃಢಪಡಿಸಲು ಇನ್ನೊಂದು ನಿದರ್ಶನವೂ ಇದೆ. ಈ ಸಂದರ್ಭದ ಘೋಷಣೆಯಲ್ಲಿ ಮದ್ಯಪ್ರತಿಬಂಧವನ್ನು ಕುರಿತು ಚಕಾರ ಶಬ್ದವೂ ಇಲ್ಲ. ಅಲ್ಲದೆ, ಆ ಪ್ರಶ್ನೆಯ ಚರ್ಚೆ ನಡೆದಾಗ, ಘೋಷಣೆಯ ಕರ್ತೃವೂ ಕಾಂಗ್ರೆಸ್ಸನ್ನು ಆಳಬಲ್ಲ ಒಬ್ಬನೇ ಒಬ್ಬ ನೇತೃವೂ ಆದ ಪಂಡಿತ ಜವಾಹರಲಾಲರು, ಆವಸರದಿಂದ ಮದ್ಯಪ್ರತಿಬಂಧ ಮಾಡಿ ದೇಶದ ಆರ್ಥಿಕ ಸ್ಥಿತಿಯನ್ನು ಹದಗೆಡಿಸುವುದು ಒಳಿತಲ್ಲವೆಂದು ವಿವರಿಸಿದರು. ಮುಂಬಯಿ ಮತ್ತು ಬೇರೆ ಕೆಲ ರಾಜ್ಯಗಳು ಈ ದಾರಿಯಲ್ಲಿಟ್ಟ ಹೆಜ್ಜೆಗಳು ಹಣಕಾಸಿನ ದೃಷ್ಟಿಯಿಂದ ತಪ್ಪೆಂದೂ ಅದು ಕಾರಣ ಅವುಗಳನ್ನು ಹಿಂದೆಗೆಯಬೇಕೆಂದೂ ಇದರ ತಾತ್ಪರ್ಯವೇ? ಮದ್ಯಪ್ರತಿಬಂಧವಿಲ್ಲದೆ ಹಿಂದುಳಿದ ವರ್ಗಗಳನ್ನು ಉದ್ಧರಿಸುವುದು ಎಂದಾದರೂ ಸಾಧ್ಯವುಂಟೇ? ಹಿಂದುಳಿದ ವರ್ಗಗಳ ಉದ್ಧಾರವು ಸರಕಾರದ ಮುಖ್ಯ ಕರ್ತವ್ಯಗಳಲ್ಲೊಂದೆಂದು ಗೃಹೀತವಾಗಿದೆ. ಆದರೆ ಕಾಂಗ್ರೆಸ್ ವಿಚಾರಧಾರೆಯ ವೇರೆಗೆ, ಅವರ ಸಾಂಸ್ಕೃತಿಕ ಮತ್ತು ಆರ್ಥಿಕ ಉದ್ಧಾರವಾಗಬೇಕಾದರೆ ಮೊದಲು ಅವರು ಕುಡಿಯುವಂತೆ ಮಾಡದೆ ವಿಧಿಯಿಲ್ಲ!

ಘೋಷಣೆಯ ಪ್ರಾರಂಭದಲ್ಲಿ ಗಾಂಧೀಜಿಯ ಎರಡು ಮೂಲ ತತ್ವಗಳ ಬ 'ನಾವು ಉಪಯೋಗಿಸುವ ಸಾಧನಗಳೇ ಕೊನೆಗೆ ನಮ್ಮ ಸಾಧ್ಯದ ಸ್ವರೂಪವನ್ನು ರೂಪಿಸುತ್ತವೆ ಮತ್ತು ರಾಷ್ಟ್ರಜೀವನದ ನೈತಿಕ ಮತ್ತು ತಾತ್ವಿಕ ತಳಹದಿಯನ್ನು ಅವಲಂಬ್ಯವೆಂದು ನಾವು ಪರಿಗಣಿಸುತ್ತೇವೆ. ಎಂಬ ವಾಕ್ಯಗಳನ್ನು ಪ್ರತಿಜ್ಞಾಪೂರ್ವಕ ಉದ್ಧರಿಸಲಾಗಿದೆ; ಇದಕ್ಕೂ ಕಾಂಗ್ರೆಸು ತಳೆದ ಧೋರಣೆಗೂ ತಾಳಮೇಳವುಂಟೇ?

ತನ್ನ ನಾಲ್ಕು ವರ್ಷಗಳ ಆಳಿಕೆಯಲ್ಲಿ ಕಾಂಗ್ರೆಸು ತನ್ನ ತತ್ವಗಳನ್ನು ಗಾಳಿಗೆ ತೂರಿದೆ. ಹಳೆಯವುಗಳ ಮಾತಿರಲಿ, ಹೊಸ ತತ್ವಗಳನ್ನು ಕೂಡ ಅದು ಉಲ್ಲಂಘಿಸಿದ್ದು ಎದ್ದು ಕಾಣುತ್ತದೆ. ನವ್ಯವಾದ ಲೌಕಿಕ ರಾಜ್ಯವೆಂದು ಬೇಸರಿಗೆ ಬರುವಷ್ಟು ಸಲವೂ ಘೋಷಿಸಲಾಗುತ್ತಿದೆ. ಆದರೆ ರಾಮರಾಜ್ಯ ಪರಿಷತ್ತು, ಹಿಂದೂಮಹಾಸಭೆಗಳಂಥ ಸಂಸ್ಥೆಗಳಿಗೆ ರಾಜಕೀಯ ಮಾನ್ಯತೆಯನ್ನಿತ್ತು ರಾಜಕೀಯ ಪಕ್ಷಗಳೆಂದು ಚುನಾವಣೆಗಳಲ್ಲಿ ಹೋರಾಡಲು ಅವಕಾಶವೀಯಲಾಗುತ್ತಿದೆ. ಲೌಕಿಕ, ಜಾತ್ಯತೀತಕದಲ್ಲಿ 'ಹಿಂದೂಸಭೆ' ಅಥವಾ 'ಮುಸ್ಲಿಂ ಜಮೂಯತ್' ನಂಥವು ರಾಜಕಾರಣದಲ್ಲಿ ಸ್ಥಾನಮಾನವನ್ನು ಪಡೆಯುವುದು ಸಾಮಾನ್ಯರಬುದ್ಧಿಗೆ ನಿಲುಕದ ಚಮತ್ಕಾ

ರ. ಇಂದಿನ ಜಗತ್ತಿನಲ್ಲಿ ರಾಜಕೀಯ ಪಕ್ಷಗಳು ಯಾವುದೂಂದು ಆರ್ಥಿಕ ಆಥವಾ ಸಾಮಾಜಿಕ ತತ್ವವನ್ನವಲಂಬಿಸಿ ಕೆಲಲ ಮಾಡುತ್ತವೆ. ಆದರೆ ಇಲ್ಲಿ ನಾವು ಜಾತ್ಯತೀತ ತಾಪ್ಪದ ಮಂತ್ರಪನ್ನು ಜಪಿಸುತ್ತ ಸಂಗಡಲೇ ಇಂಥ ಜಾತೀಯ ಪಕ್ಷಗಳ ಅಸ್ತಿತ್ವಕ್ಕೆ ಎಡೆಗೊಡುತ್ತೇವೆ. ಕಾಂಗ್ರೆಸ್ಸಿನೊಳಗಿನ ಬೇರೆ ಬೇರೆ ಗುಂಪುಗಳ ಜಾತೀಯ ಭಾವನೆಯನ್ನು 'ಸರಕಾರೇತರ'ವೆಂದು ಹಾರಿಸಿಬಿಡಬಹುದು; ಆದರೆ ಸರಕಾರದ ಇಂಥ ಘೋರಣಾಕ್ಕೇನು ಸಮಾಧಾನ?

ಸ್ತ್ರೀಯರ ವಿನೋಚನೆಯ ಬಗ್ಗೆ ಮಾತಾಡುವುದಕ್ಕೇನೂ ತುಡಿಹೊದಲಿಲ್ಲ; ಅದರ ಕಿರುಳಿನ ಪರೀಕ್ಷೆ ಮುಂದಿನ ಚುನಾವಣೆಗಳಲ್ಲಿ ಆಗಬೇಕು. ಆದರೆ ಸುರಾಪಾಷದ ದುಷ್ಪರಿಣಾಮದ ಹೊಡೆತ ಬೀಳುವುದು ಹೆಚ್ಚಾಗಿ ದೇಶದ ಸ್ತ್ರೀಜಷರ ಮೇಲೆಂಬುದನ್ನು ನಾವು ಮರೆಯಬಾರದಿಲ್ಲ.

ಘೋಷಣೆಯ ಪ್ರತಿಯೊಂದು ಅಂಶವನ್ನು ಎತ್ತಿ ಉದ್ಘಾಟಿಸಲು ನಮಗೆ ಇಚ್ಛೆಯಿಲ್ಲ. ಆದರೆ ಇಷ್ಟು ಮಾತ್ರ ಹೇಳಬಯಸುತ್ತೇವೆ–ಗಾಂಧೀಜಿಯ ಹೆಸರನ್ನು ಪ್ರಾರಂಭದಲ್ಲಿ ಸ್ಮರಿಸಿರುವುದು ಕೇವಲ ಮುಂಬರುವ ವಿಘ್ನಗಳ ನಿವಾರಣೆಗಾಗಿ ಮತ್ತು ಕಾಂಗ್ರೆಸ್ಸು ಹಿಡಿದಿರುವ ಹೊಸ ದಾರಿಯನ್ನು ನಿರಾತಂಕವಾಗಿ ಮಾಡುವುದಕ್ಕಾಗಿ ಮಾತ್ರ. ಗಾಂಧೀಜಿಯ ಹೆಸರನ್ನು ಇದರೊಳಗೆ ಎಳೆಯದಿದ್ದರೆ ಚೆನ್ನಾಗಿತ್ತೆಂದು ಮೊದಲು ನಾವು ಹೇಳಿದ್ದು ಇದಕ್ಕಾಗಿಯೇ. ಖಾದಿ ಮತ್ತು ಗ್ರಾಮೋದ್ಯೋಗಗಳ ಮೂಲ ತತ್ವಗಳ ಕಲ್ಲೊಲೆ ಮಾಡಿ, ಗಾಂಧೀ ಪ್ರಣೀತ ನೈತಿಕ ಮಾರ್ಗದಲ್ಲಿ ದೇಶವು ಅಡಿಯಿಡತೆ ಸಾಗಿಸುವೆಂಬುದೊಂದು ವಿಡಂಬನೆಯಲ್ಲದೆ ಮತ್ತೇನು? ಸ್ವಾವಲಂಬಿ ಮತ್ತು ನೈತಿಕ ಜೀವನ ಅಹಿಂಸಕ ಸಮಾಜನಿರ್ಮಾಣದ ಮೂಲಾಧಾರ. ಅದನ್ನೇ ನಿರಾಕರಿಸಿದ ಬಳಿಕ ನಾವು ಅಹಿಂಸಕ ಸಮಾಜ ನಿರ್ಮಾಣದಲ್ಲಿ ಪ್ರಾಮಾಣಿಕರಾಗಿದ್ದೇವೆಂದು ಹೇಗೆ ಹೇಳಿಕೊಳ್ಳಬಹುದು? ಆದ್ದರಿಂದ ಮೇಲೆ ಹೇಳಿದ ಗಾಂಧೀಜಿಯ ಕಲ್ಪನೆಯಲ್ಲಿ ವಿಶ್ವಾಸವುಳ್ಳವರಿಗೆ ಕಾಂಗ್ರೆಸಿನಲ್ಲಿ ಸ್ಥಾನವಿಲ್ಲೆಂದೂ ನಾವು ಭಾವಿಸಿದ್ದೇವೆ. ಖಾದಿ, ಗ್ರಾಮೋದ್ಯೋಗ, ಮದ್ಯಪ್ರತಿಬಂಧ ಮೊದಲಾದ ಉಪಾಯಗಳಿಂದ ಅಹಿಂಸಕ ಸಮಾಜವನ್ನು ನಿರ್ಮಿಸಬೇಕೆಂದು ನಂಬಿರುವವರು ಹೊಸ ದಾರಿ ಹುಡುಕುವ ಕಾಲವೀಗ ಬಂದಿದೆ.

(ಹರಿಜನದಿಂದ)

ಚುನಾವಣೆಯೂ ಕಮ್ಯೂನಿಷ್ಟರೂ

ಕಮ್ಯೂನಿಷ್ಟ ಪಕ್ಷವು ಖಡತನದ ಭೂತವನ್ನೆದುರಿಸುವುದು, ಸಮತೆಯನ್ನು ಸಾಧಿಸುವುದು, ಅದು ಶ್ರಮಜೀವಿಗಳ ಕೂಲಿಯೂಳುಗಳ ಕೈವಾರಿ, ಎಂಬ ಬಿರುದು ಬಾವಲಿಗಳನ್ನು ಹೊತ್ತು ನಿಂತಿದ್ದರೂ ರೈತರ ರಕ್ಷಕನೆಂದು ಹೊಗಳಿಸಿಕೊಳ್ಳುತ್ತಿದ್ದರೂ ಅದು ಜನಪ್ರಿಯವಾಗಲೊಲ್ಲದು. ಇದಕ್ಕೆ ಹತ್ತಕಾರಣಗಳುಂಟು. ಅದರ ವಿರುದ್ಧ ಜನತೆಯು ಸಾಮಾನ್ಯವಾಗಿ ಹೊರಿಸುವ ಆಕ್ಷೇಪವೆಂದರೆ ಅದು ರಶಿಯದ ಸೆರಗು ಹಿಡಿವ ಶಿಶುವೆಂಬುದು. ಮೂಸ್ಕೋದ ಮೂತಿನಂತೆ ಮಣಿಯುವ ಕುಣಿಯುವ ಪಕ್ಷವೆಂಬುದು ಒಂದು ವಿದೇಶದ ಆದೇಶದಂತೆ ನಡೆಯುವ ಪಕ್ಷವು ಇದೀಗ ಸ್ವತಂತ್ರವಾದ ಭಾರತಕ್ಕೆ ಹಿತಕಾರಿಯೂ ಗಲಾರದು. ಕಮ್ಯೂನಿಷ್ಟ ಮುಂದಾಳುಗಳು ಈ ಆರೋಪವನ್ನು ಅಲ್ಲಗಳೆಯುತ್ತಾರೆಂಬುದನ್ನು ಮರೆಯಲಾಗದು. ಹೀಗಿರುತ್ತ ಮತದಾರರು ಈ ಪಕ್ಷದ ಗೊತ್ತು ಗುರಿಗಳ ಬಗೆಗೆ ಕೂಲಂಕಷ ವಿವರಗಳನ್ನು ಅರಿತುಕೊಳ್ಳಬೇಕು. ಮೇಲಿನ ಆರೋಪಕ್ಕೆ ಸಾಕಷ್ಟು ಆಧಾರವಿರುವುದೆಂದು ಮನವರಿಕೆಯಾದರೆ ಅಂತಹ ಪಕ್ಷದ ಸಹವಾಸವನ್ನೇ ತೊರೆಯಬೇಕು. ಅದಲ್ಲದೆ ಕಮ್ಯೂನಿಷ್ಟರು ಕ್ರಾಂತಿಕಾರರು, ಕೊಲೆಸುಲಿಗೆಗಳನ್ನೆಸಗುವ ಹಿಂಸಾವೂರ್ಗಗಳು ಎಂಬ ಕೂಗು ಎಲ್ಲೆಲ್ಲಿಯೂ ಕೇಳಿಬರುತ್ತಿದೆ. ಈ ಮಾತಿನರ್ಥ ವಿಮರ್ಶಗನ್ನೂ ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಮತದಾರರು ಹಿಂಸಾವೂರ್ಗವನ್ನೆಂದಿಗೂ ಒಪ್ಪಲಾರರು. ನಮ್ಮ ಭೌರತೀಯ ಸಮಾಜ ವರ್ಗಗಳಲ್ಲಿ ಆದೆಷ್ಟು ಆರ್ಥಿಕ ಅಸಮತೆಯಿದ್ದರೂ ಅದನ್ನು ಕಡಿಮೆಯಾಗಿಸಿ ತಿದ್ದಲು ಹಿಂಸಾಚಾರವು ಸಲ್ಲದ ದಾರಿಯೆಂಬುದನ್ನು ಯಾರು ತಿಳ್ಳಗಳೆಯರು. ನ್ಯಾಯಬದ್ಧವಾದ ಶಾಸನ ಕ್ರಮಗಳಿಂದ ಸುಧಾರಣೆಯು ಸಾಧ್ಯವಿರುವಾಗ ಹಿಂಸೆಯು ಹಾದಿಯು ಸರಿಯಲ್ಲ.

ರಾಜಕೀಯವಾದಿಗಳ ಈ ವರ್ತನೆಯಿಂದ ದೇಶಕ್ಕೆ ಕಲ್ಯಾಣವಾಗದು.

ಲೇ:–ಶ್ರೀ ಕೆ. ಸಿ. ಕರುಂಬಯ್ಯ, ವಿರಾಜಪೇಟೆ.

ಹಲವು ತಿಂಗಳಿಂದ ಇತ್ತೀಚೆಗೆ ಕೊಡಗಿನ ಪತ್ರಿಕೆಗಳನ್ನು ನೋಡಿದ್ದೇ ಆದರೆ ವ್ಯಕ್ತಿಕೇಂದ್ರಿತವಾದ ಟೀಕೆಗಳೇ ಪತ್ರಿಕೆಗಳಲ್ಲಿ ತುಂಬಿರುತ್ತವೆ. ಪತ್ರಿಕೆಗಳಲ್ಲಿ ವಾರ್ತೆಯೇ ಇಲ್ಲ, ಇತ್ತೀಚೆಗೆ ಎಡೆಬಿಡದೆ ನಡೆಯುತ್ತಿರುವ ಚುನಾವಣಾ ಪ್ರಚಾರಕ ಸಭೆಗಳಲ್ಲಿಯೂ ಕೂಡ ಇದೇ ಪುರಾಣದ ಉಲ್ಲೇಖನವಾಗುತ್ತದೆ. ಇಷ್ಟು ಪರ್ವಗಳ ಕಾಲ ಸುಸ್ತಾವಸ್ಥೆಲ್ಲಡಗಿದ್ದ ಪರಸ್ಪರ ಕುಂದುಕೊರತೆಗಳುಚುನಾವಣೆಸವಿಪಿಸಿದಂತೆಯೇ ಒಂದಕ್ಕೆ ಮೂರಾಗಿ, ಅಪಪ್ರಚಾರವಾಗಿ ಮೂರ್ಪಟ್ಟು ಹೊರಬೀಳುತ್ತಿವೆ. ರಾಜಕೀಯ ಅಭಿಜ್ಞಾನವಿದ್ದು, ದೇಶದ ವಿಚಾರ ತಿಳುವಳಿಕೆಯಿರುವ ಈ ಮಹನೀಯರುಗಳೇ ಈ ರೀತಿಯ ಕುರುಕ್ಷೇತ್ರದಂತಹ ಕಾಳಗವನ್ನು ನಡೆಸಲು ಮೊದಲು ಮೂಡಿದರೆ ರೈತಾಪಿ ಹಾಗೂ ಕೂಲಿಕಾರವರ್ಗದವರ ಪಾಡೇನು? ಕಲ್ಲಪ್ಪ ಗುಂಡಪ್ಪ ಸೇರಿ ವೆಣಸಪ್ಪ ಪುಡಿಯಾದಂತೆ ಈ ಪಾರ್ಟಿಗಳು ಗುದ್ದಾಟದಲ್ಲಿ ರೈತ ಕೂಲಿಕಾರರ ಪರ್ಗ ಪುಡಿಯೂಗುವುದರಲ್ಲಿ ಸಂದೇಹವಿಲ್ಲ ಇದು ಬಹಳ ವಿಷಾದಕರವಾದ ಸಂಗತಿಯೂಗಿದೆ. ಓಟುಕೊಡುವ ಸಮಯ ಬರುವುದಕ್ಕೆ ಮೊದಲು ಪ್ರತಿಯೊಬ್ಬರ ವೈಯಕ್ತಿಕ ಪರಿಚಯ ಅವರ ಹಿಂದಿನ ಚರಿತ್ರೆಯನ್ನು ತಿಳಿದು ಕೊಳ್ಳುವುದು ಯೋಗ್ಯವಾದುದೆ. ಆದೇ ರೀತಿ ಇದಕ್ಕೆ ಮೊದಲೇ ಪ್ರಕಟಿವಾದ ಪತ್ರಿಕೆಗಳಿಂದಲೂ ಎಲ್ಲಾ ರೀತಿಯಿಂದಲೂ ಈ ವ್ಯಕ್ತಿಗಳ ವಿಷಯ ನಮ್ಮ ಜನತೆಗೆ ಸಾಕಷ್ಟು ಮೂಹಿತಿಯೂಗಿದೆ. ಆದರೆ ಪರಸ್ಪರ ದೂಷಿಸುವುದನ್ನೇ ಚುನಾವಣಾ ತತ್ವವನ್ನಾಗಿ ಮಾಡಿಕೊಂಡು ಓಟು ಕೇಳುತ್ತಿರುವುದು ನಮ್ಮ ರಾಜಕೀಯ ವಾದಿಗಳು ಮಾಡುತ್ತಿರುವ ಮಹಾಪರಾಧವೆಂದು ಹೇಳಬೇಕಾಗುತ್ತದೆ. ಇಂದು ಈ ಮಹನೀಯರುಗಳು ಅಹಿಂಸಾತತ್ವವನ್ನು ಮರೆತು ಹಿಂಸಾಕೃತ್ಯಕ್ಕೆ ಇಳಿದಿರುವಂತೆ ತೋರುತ್ತದೆ. ಯಾವ ರೀತಿಯಿಂದಲಾದರು ಓಟು ಪಡೆಯಬೇಕೆಂದು ಹಂಬಲದಿಂದ ಅಕ್ಷಮ್ಯವಾಗಿ ವರ್ತಿಸುವುದು ಬಹಳ ದುಃಖಕರವಾದ ವಿಷಯವಾಗಿದೆ. ತನ್ನ ಮನೆಯ ಮುಂದೆ ಅನೆ ಸತ್ತು ಬಿದ್ದಿದ್ದರೂ ಪರರ ಮನೆಯ ಮುಂದೆ ನೊಣ ಸತ್ತು ಬಿದ್ದನ್ನು ನೋಡಿ ಜಗಳಕ್ಕೆ ಹೋದವನಂತೆ ನಮ್ಮ ರಾಜಕೀಯವಾದಿಗಳು ವರ್ತಿಸುತ್ತಿರುವುದು ಶ್ರೇಯಸ್ಕರವಲ್ಲ. ಹಳೆಯ ಹುಳುಕನ್ನು ಆಗಲವೂಡುವುದರ ಬದಲು ಹುಳುಕು ಎಂತಹದೆಂದು ಪರೀಕ್ಷಿಸಿ, ಔಷಧಿ ಕೊಟ್ಟು ವಾಸಿಮಾಡುವುದು ಇಂದಿನ ಕರ್ತವ್ಯವಾಗಿದೆ. ಮಾಡಿದ ತಪ್ಪುಗಳನ್ನು ತಿದ್ದಿ, ಮುಂದಿನ ಏಳಿಗೆಗಿರುವ ಮಾರ್ಗವನ್ನು ಕಂಡುಹಿಡಿಯುವುದು ನ್ಯಾಯವಾದ ಮಾರ್ಗ. ನಮ್ಮ ದೇಶವಲ್ಲಿ ಚುನಾವಣೆಗೆ ನಿಂತಿರುವ ಅನೇಕ ಉಮೇದುವಾರರು ಬರೀ ಕುರ್ಚಿಯ ಸ್ಥಾನವನ್ನು ಯೋಚಿಸಿಕೊಂಡು ಓಟು ಕೇಳುತ್ತಿರುವಂತೆ ತೋರುತ್ತಿದೆ. ಯಾವನೇ ಒಬ್ಬ ಉಮೇದುವಾರನು, ವೈಯಕ್ತಿಕ ಮತ್ತು ಪಂಗಡಗಳದ್ವೇಷದಿಂದ ವೇದಿಕೆಯ ಮೇಲೆ ನಿಂತು ಘಂಟಾಘೋಷವಾಗಿ ಪರರನ್ನು ತೀಕಿಸಿ ಓಟು ಕೇಳಿದ್ದೇ ಆದರೆ ಅದು ದೇಶಕ್ಕೆ ದ್ರೋಹ. ಬೇರೊಬ್ಬರು ತಪ್ಪು ಮಾಡಿದ್ದರೂ ಸರಿಯೇ ಮಾಡದಿದ್ದರೂ ಸರಿಯೇ ಅವರನ್ನು ಯದ್ವಾತದ್ವಾ ತೀಕಿಸಿ ಆತ್ಮಪ್ರಶಂಸೆ ಮಾಡಿ, ತಾನು ಮೇಲೆಂದು ಹೇಳಿ ಜನರನ್ನು ಆಕರ್ಷಿಸಿ ಸ್ಥಾನಗಳಿಸುವುದು ಜನತೆಯನ್ನು ಷಂಚರಿಸಿದಂತೆಯೇ ಸರಿ. ದೇಶದಲ್ಲಿ ನಿರಕ್ಷರ ಸ್ಥರ ಸಂಖ್ಯೆ ಹೆಚ್ಚಾಗಿದೆ. ಅವರನ್ನು ಬೇಗನೆ ಪರಿಳಗೊಳಿಸಬಹುದೆಂದು ಇಂತಹ ಜನತೆಗೆ ಮಂಕುಬೂದಿಯನ್ನು ಚೆಲ್ಲುವುದು ದೇಶದ ಏಳಿಗೆಗೆ ಕುಂದು. ಇಂತಹ ಅನ್ಯಾಯದ ವರ್ತನೆಗಳು ಯಾವ ಮಾತ್ರದಿಂದಲೂ ತರವಲ್ಲ.

ಇಂದು ನಮ್ಮ ಮುಂದೆ ಜಟಿಲವಾದ ಸಮಸ್ಯೆಯು ನಿಂತಿದೆ. ಆರ್ಥಿಕ ಮುಗ್ಗಟ್ಟು ಹೆಚ್ಚಾಗುತ್ತಾ ಬರುತ್ತಿದೆ. ಅನ್ನ, ವಸ್ತ್ರಕ್ಕೆ ಬಹಳ ತೊಂದರೆಯೂಗಿದೆ. ಉದ್ಯೋಗಸ್ಥರಿಗೆ ತಮ್ಮ ಜೀವನ ಹಾಗೂ ಸಂಸಾರದ ಜೀವನ ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗಿದೆ. ರೈತರಿಗೂ ಉದ್ಯೋಗಸ್ಥರಿಗೂ ಸಾಲ ಹೆಚ್ಚುತ್ತಾ ಹೋಗುತ್ತಿದೆ. ನಿರುದ್ಯೋಗಿಗಳು ದೇಶದಲ್ಲಿ ಅನೇಕ ಜನರು ಆಕಳಿಸುತ್ತಾ ಇದ್ದಾರೆ. ಭಿಕ್ಷುಕರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಾ ಇದೆ. ಕೂಲಿಕಾರವರ್ಗದವರು ಒಂದು ದಿವಸ ಕಾಯಿಲೆಯೂಗಿ ಮಲಗಿದರೆ ಮೂರನೆ ದಿವಸಕ್ಕೆ ಅನ್ನವಿಲ್ಲ. ದೇಶದ ಉತ್ಪತ್ತಿ ಕಡಿಮೆಯೂಗುತ್ತ ಬರುತ್ತಿದೆ. ಆಗುತ್ತಿರುವ ಉತ್ಪತ್ತಿ ಎಲ್ಲೆಲ್ಲೋ ಕಳ್ಳಸಂತೆಯ ಮೂರ್ಗವಾಗಿ ಎಲ್ಲಿಗೋ ಸಾಗುತ್ತಿದೆ. ಇಂತಹ ಸನ್ನಿವೇಶದಲ್ಲಿಯೇ ನಮ್ಮ ಜನರು ತಮ್ಮ ಭವಿಷ್ಯತ್ತನ್ನು ಕಾರ್ಗತ್ತಲೆಯಲ್ಲಿ ಬಿಟ್ಟಿರುವರು. ಇವುಗಳನ್ನು ಎದುರಿಸಲು ನಾವು ಹೋರಾಡಬೇಕಾಗಿದೆ. ಜವಾಬ್ದಾರೀ ಸರ್ಕಾರವನ್ನು ಶೀಘ್ರದಲ್ಲಿಯೇ ಕಟ್ಟಲಿದ್ದೇವೆ. ಉಮೇದುವಾರರ ಆಯ್ಕೆಯೂಗಬೇಕಾಗಿದೆ. ಅದಕ್ಕೆ ತಕ್ಕಂತೆ ಅನೇಕ ಉಮೇದುವಾರರು ಮುಂದೆ ಬಂದು ನಿಂತು ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ. ಆದರೆ ಹಣದುಬ್ಬರದಿಂದ, ಆತ್ಮಪ್ರಶಂಸೆ ಮಾಡಿ ಓಟು ಕೇಳುವ ಉಮೇದುವಾರರು ನಮಗೆ ಬೇಕಾಗಿಲ್ಲ. ಇವರನ್ನು ದೇಶಸೇವಕರೆಂದೂ ಕರೆಯಲು ಆಗುವುದಿಲ್ಲ. ಆರ್ಥಿಕ ಮುಗ್ಗಟ್ಟಿನ ನಿವಾರಣೆಗಾಗಿ, ಅನ್ನವಸ್ತ್ರದ ಪ್ರಶ್ನೆಯನ್ನು ಬಗೆಹರಿಸಲಿಕ್ಕಾಗಿ, ನಿರುದ್ಯೋಗದ ಸಮಸ್ಯೆಯ ಪರಿಹಾರಕ್ಕಾಗಿ ದೇಶದ ಕೈಗಾರಿಕೋತ್ಪತ್ತಿಯ ಅಭಿವೃದ್ಧಿಗಾಗಿ ಯಾವ ರೀತಿಯ ಘೋರಣೆಯನ್ನು ಕೈಗೊಳ್ಳಬಹುದು, ಈ ಗುರಿಯನ್ನು ಮುಟ್ಟಲು ಹೇಗೆ ಸಾಧ್ಯತೆಯಿರುತ್ತದೆಯೆಂಬುದನ್ನು ತಿಳಿಸುವುದು ಹೆಚ್ಚಾಗಿ, ಇಂದಿನ ಮಟ್ಟಿಗೆ ವಿಚಾರ ತಿಳಿದಂತಹ ಉಮೇದುವಾರರ, ಹಾಗೂ ದೇಶಸೇವಕರ ಕೈಯ್ಯಲ್ಲಿದೆ. ಈ ರೀತಿ ವರ್ತನೆಯಲ್ಲಿ ರಾಜಕೀಯವಿದೆ ಇಂತಹವರನ್ನು ಆರಿಸುವುದು ಯೋಗ್ಯವಾದುದು. ಇದರಿಂದಲೇ ದೇಶಕ್ಕೆ ಕಲ್ಯಾಣವಾಗುವುದು. ಬದಲಾಗಿ ಕರ್ತವ್ಯವನ್ನು ಮರೆತು ಜನತೆಗೆ ಬೇಕಾದ್ದನ್ನ ಬಿಟ್ಟು ಬೇಡಾದ್ದನ್ನ ಎತ್ತಿ ಸ್ವಪ್ರಶಂಸೆ, ಪರದೂಷಣೆಯಿಂದ ಜನರನ್ನು ಬೆರಗುಗೊಳಿಸಿ ಮತ ಪಡೆದು ಬಂದು ಕಟ್ಟಲಿರುವ ಮಂತ್ರಿಮಂಡಳದಿಂದ ದೇಶದ ಕಲ್ಯಾಣ ಎಂದೂ ಆಗದು.

Edited Printed & Published by P. I. Belliappa at 'Kodagu' Press, Mercara, for 'Kodagu' Ltd.